ಶ್ರೀ ಡಿ. ಗೋವಿಂದದಾಸ್‌ರವರು.—ಕುದುರೆಗಳನ್ನು ಪರದೇಶದಿಂದ ತರಿಸುತ್ತೀರಾ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.— ಹೌದು. Breeding horses ಪರದೇಶದಿಂದಲೇ ತರಿಸುವುದು.

ಶ್ರೀ ಡಿ. ಗೋವಿಂದದಾಸ್‌ರವರು.—ಅಲ್ಲಿರತಕ್ಕ ಬೀಜದ ಕುದುರೆಗಳ ಬೆಲೆ ಎಷ್ಟೆಂಬುದನ್ನು ಹೇಳುತ್ತೀರಾ?

The Hon'ble Sri T. MARIAPPA.—I want notice.

Mr. SPEAKER.—Question time is over.

SHORT NOTICE QUESTION.

Sri V. S. NARAYANA RAO (Bangalore City—General).—Sir, I had given notice of a Short Notice Question and it is more than four days since I handed it over. I do not know what has become of it.

Mr. SPEAKER.—Answers from Government are expected. They have not yet been received.

Voting on Demands for Grants for 1951-52.

Mr. SPEAKER (The Hon'ble Sri V. Venkatappa).—Voting on Demands for Grants for 1951-52 will be resumed. Demands No. 26 to 38 will be placed before the House to-day. The Hon'ble Minister for Finance and Industries may move Demand No. 26.

DEMAND No. 26—INDUSTRIES AND SUPPLIES.

43. Industries and Supplies (except Sericulture).

The Hon'ble Sri H. C. DASAPPA (Minister for Finance and Industries).—Sir, on the recommendation of His Highness the Maharaja, I beg to move:

"That a sum not exceeding Rs. 35,73,600 be granted to the Government to defray the charges which will come in course of payment during the year ending 31st day of March 1952, in respect of 'Industries and Supplies' (except Sericulture)."

Mr. SPEAKER.—Motion moved.—

"That a sum not exceeding Rs. 35,73,600 be granted to the Government to defray the charges which will come in course of payment during the year ending 31st day of March 1952, in respect of 'Industries and Supplies' (except Sericulture.)"

Cut motion No. 102. II list. Sri A. Bheemappa Naik.

Proposal for Management by Joint Stock Companies of certain industries started by Government.

Sri A. BHEEMAPPA NAIK (Chitaldrug District—General).—Sir, I beg to move.

"That the demand under the head 1943. Industries and Supplies (except Sericulture') for Rs 35,73 600 be reduced by Rs. 100 (to consider the desirability of retaining only the basic and key industries under the control of the State Government and arranging the control of other industries started by Government to be managed by Joint-Stock Companies with some Government share in them)."

ಸ್ವಾಮಿ, ಮೈಸೂರು ದೇಶ ಬಹಳ ದಿವಸಗಳಿಂದಲೂ ಕೈಗಾರಿಕೆಗಳನ್ನು ಸರ್ಕಾರದ ಹಣದಿಂದಲೇ ನಡೆಸಿಕೊಂಡು ಬಂದಿದೆ ಹೀಗಾಗಿ ಈಗ ರಾಷ್ಟ್ರೀಕರಣ ಎಂದು ಏನು ಹೇಳುತ್ತಿದ್ದಾರೋ ಅದನ್ನು ಮೈಸೂರು ದೇಶದಲ್ಲಿ ಬಹಳ ದಿವಸಗಳ ಹಿಂದೆಯೇ ಜಾರಿಗೆ ತಂದು ಕೆಲವು ಕೈಗಾರಿಕೆಗಳನ್ನು ಹಿಂದಿನಿಂದಲೂ ರಾಷ್ಟ್ರೀಕರಣ ಮಾಡಿಕೊಂಡು ಬಂದಿದ್ದಾರೆ. ಇದರಲ್ಲಿ ಜನತೆಗೆ ಅತ್ಯಗತ್ಯವಾಗಿರುವ ವಸ್ತುಗಳನ್ನು ತಯಾರು ಮಾಡತಕ್ಕ ಕೈಗಾರಿಕೆಗಳನ್ನೂ ಮತ್ತು ಕಚ್ಚಾ ಮಾಲುಗಳನ್ನು ತಯಾರು ಮಾಡಿ ಅದರಿಂದ ನಡೆಸಬಹುದಾದ ಕೈಗಾರಿಕೆಗಳನ್ನು Key or Basic ಕೈಗಾರಿಕೆಗಳೆಂದು ಯಾವುದನ್ನು ಕರೆಯುತ್ತಾರೋ ಅಂತಹ ಕಬ್ಬಿಣದ ಕಾರ್ಖಾನೆ, ವಿದ್ಯುಚ್ಛಕ್ತಿಯನ್ನು ತಯಾರು ಮಾಡತಕ್ಕ ಕಾರ್ಖಾನೆ ಮತ್ತು ವಿದ್ಯುಚ್ಛಕ್ತಿಯ ಸಲಕರಣೆಗಳನ್ನು ಅಥವ ಅದಕ್ಕೆ ಬೇಕಾದ ಸಾಮಾನುಗಳನ್ನು ತಯಾರು ಮಾಡತಕ್ಕ ಕಾರ್ಖಾನೆ, ಸಿಮೆಂಟು ಕಾರ್ಖಾನೆ, ಕಾಗದದ ಕಾರ್ಖಾನೆ ಇವುಗಳನ್ನೆಲ್ಲಾ ಒಂದು ದೃಷ್ಟಿಯಿಂದ ಬೇಸಿಕ್ ಕೈಗಾರಿಕೆಗಳೆಂದು ಕರೆಯಬಹುದು. ಇವುಗಳಲ್ಲದೆ ಇನ್ನು ಕೆಲವು ಅಂದರೆ, ಸೋಪು, ಸಿಲ್ಕ್‌ಫಿಲೇಚರ್, ಪೋರ್ಸೆಲೀನ್ ಮುಂತಾದ ಇನ್ನೂ ಕೆಲವು ಕೈಗಾರಿಕೆಗಳನ್ನೂ ಮೈಸೂರು ಸರ್ಕಾರ ಬೆಳೆಸಿಕೊಂಡು ಬಂದಿದೆ. ಹೀಗೆ ಸರ್ಕಾರ ಬೆಳೆಸಿಕೊಂಡು ಬಂದಿರತಕ್ಕ ಕೈಗಾರಿಕೆಗಳ ಫಲ ಹೇಗಿದೆಯೆಂದರೆ, ಇತ್ತೀಚೆಗೆ ಇಡೀ ಭಾರತದಲ್ಲಿ ವಸ್ತುಗಳ ಅಭಾವ ಬಂದಾಗ ಮೈಸೂರು ದೇಶ ಹಾಕಿಕೊಂಡು ಬಂದಿರುವ ಒಂದು ಒಳ್ಳೆಯ ಮಾರ್ಗದಿಂದ ದೇಶಕ್ಕೆ ಎಷ್ಟು ಸಹಕಾರಿಯಾಯಿತು, ಎಷ್ಟು ಉಪಕಾರವಾಯಿತು ಎಂಬುದು ಎಲ್ಲರಿಗೂ ಗೊತ್ತಿರುವ ಸಂಗತಿ. ಕಬ್ಬಿಣದ ಕಾರ್ಖಾನೆ ಒಂದು ಬಿಳಿಯ ಆನೆ, ಇದಕ್ಕೆ ಹೆಚ್ಚು ಸರ್ಕಾರದ ಹಣವನ್ನು ಹಾಕಬಾರದು ಎಂದು ಕೆಲವು ಜನರು ಹೇಳಿದರೂ ಕೂಡ ಅಂದಿನ ಸರ್ಕಾರ ಅದನ್ನು ಗಮನಿಸದೆ ಆ ಕೈಗಾರಿಕೆಯನ್ನು ಬೆಳೆಸಿಕೊಂಡು ಬಂದದ್ದರಿಂದ ಯುದ್ಧಕಾಲದಲ್ಲಿ ವಸ್ತುಗಳ ಅಭಾವ ಕಾಲದಲ್ಲಿ ಅದು ಎಷ್ಟು ಅನುಕೂಲ ಮಾಡಿತು, ಇದರಿಂದ ಮನೆಗಳನ್ನು ಕಟ್ಟುವವರಿಗೆ ಎಷ್ಟು ಉಪಕಾರವಾಯಿತು ಎಂಬುದು ಎಲ್ಲರಿಗೂ ಗೊತ್ತಿದೆ.

ಹಾಗೆ ಮಾಡಿದುದೇನೋ ಬುದ್ಧಿವಂತಿಕೆಯ ಕೆಲಸ. ಅನೇಕ ಕೈಗಾರಿಕೆಗಳು ಚೆನ್ನಾಗಿಯೂ ಲಾಭದಾಯಕವಾಗಿಯೂ ರಾಷ್ಟ್ರ ನಿರ್ಮಾಣಕ್ಕೆ ಉಪಯುಕ್ತವಾಗಿಯೂ ಬೆಳೆಯುತ್ತಿವೆ. ಅದೇ ಸದುದ್ದೇಶದಿಂದ ಇನ್ನೂ ಅನೇಕ ಕೈಗಾರಿಕೆಗಳನ್ನು ಪ್ರಾರಂಭ ಮಾಡಿದೆವು, ಅವುಗಳಲ್ಲಿ ಕೆಲವು ಕೈಗಾರಿಕೆಗಳಲ್ಲಿ ಎಷ್ಟು ಲಾಭ ಬರಬೇಕೋ ಅಷ್ಟು ಬಾರದೇ ಇದ್ದರೂ, ಅವು ರಾಷ್ಟ್ರ ನಿರ್ಮಾಣಕ್ಕೆ ಅಗತ್ಯವಲ್ಲದಿದ್ದರೂ ಅವುಗಳನ್ನು ಸರ್ಕಾರ ನಡೆಸಿಕೊಂಡು ಬರುವುದು ಸೂಕ್ತವೇ ಎಂಬುದನ್ನು ಯೋಚಿಸಬೇಕಾಗಿದೆ. ಉದಾಹರಣೆಗೆ ಸೋಪ್ ಕಾರ್ಖಾನೆ, ಸಾಬೂನು ಜನರಿಗೆ ಬೇಕು, ನಿಜ. ಆದರೆ ಈ ಕೈಗಾರಿಕೆಯನ್ನು ರಾಷ್ಟ್ರ ಅಥವ ಸರ್ಕಾರ ಇಟ್ಟುಕೊಂಡು ನಡೆಸಬೇಕೆ ಅಥವ ಜನರೇ ತೆಗೆದುಕೊಂಡು ನಡೆಸಬೇಕೆ ಎಂಬುದು ಯೋಚನೆ ಮಾಡತಕ್ಕ ವಿಷಯ. ಒಂದು ಕೈಗಾರಿಕೆ ನಡೆಸಿದರೆ, ಅದರಿಂದ ಉತ್ಪನ್ನವಾಗುವ ವಸ್ತುಗಳನ್ನು ಇತರರಿಗೆ ಕೊಟ್ಟು ಅದರಿಂದ ಇತರ ಕೈಗಾರಿಕೆಗಳು ಬೆಳೆಯುವಂತಿದ್ದರೆ ಅಂತಹ ಕೈಗಾರಿಕೆಯನ್ನು ಸರ್ಕಾರ ನಡೆಸಬಹುದು. ಸಾಬೂನು ಕಾರ್ಖಾನೆ, ಸಕ್ಕರೆ ಕಾರ್ಖಾನೆ, ರೇಷ್ಮೆ ಕಾರ್ಖಾನೆ ಮುಂತಾದವುಗಳನ್ನು ಸಾರ್ವಜನಿಕರಿಗೆ ಬಿಟ್ಟುಕೊಡುವುದು ಒಳ್ಳೆಯದು. ಸರ್ಕಾರ ಎಷ್ಟೇ ಹಣ ಹಾಕಿದರೂ ಅವುಗಳನ್ನು ಸರಿಯಾಗಿ ನಡೆಸಲು ಕೆಲವು ತೊಂದರೆಗಳಿವೆ. ಅಕೌಂಟ್ಸ್‌ಗೆ ಸಂಬಂಧಪಟ್ಟ ನಿಯಮಗಳು ಪ್ರೊಸೀಜರ್‌ಗೆ ಸಂಬಂಧಪಟ್ಟ ನಿಯಮಗಳೂ ಎಲ್ಲವನ್ನೂ ಅನುಸರಿಸಬೇಕಾದ್ದರಿಂದ ಸಕಾಲಕ್ಕೆ ಕೆಲಸಕಾರ್ಯಗಳು ನಡೆಯದೆ ಇತರ ಖಾಸಗಿಯವರ ಕೈಯಲ್ಲಿ ಇವುಗಳಿದ್ದರೆ ಎಷ್ಟು ಲಾಭದಾಯಕವಾಗಿ ನಡೆಯುತ್ತವೆಯೋ ಅಷ್ಟು ಲಾಭದಾಯಕವಾಗಿ ನಡೆಯುತ್ತಿಲ್ಲ, ಅನೇಕ ಅಡ್ಡಿ ಆತಂಕಗಳಿವೆ ಎಂಬುದನ್ನು ಕೈಗಾರಿಕೆ ಮಂತ್ರಿಗಳು ಖಂಡಿತವಾಗಿ ಒಪ್ಪುತ್ತಾರೆಂದು ಭಾವಿಸುತ್ತೇನೆ. ಸರ್ಕಾರ ನಡೆಸುವ ಕೈಗಾರಿಕೆಗಳಲ್ಲಿ ಎಲ್ಲವೂ ಸರ್ಕಾರಿ ನಿಬಂಧನೆಗಳ ಪ್ರಕಾರ ನಡೆಯಬೇಕು. ಯಾವುದೇ ಒಂದು ಪದಾರ್ಥ ತಕ್ಷಣ ಬೇಕಾಗಿ ಬಂದರೆ, ಅದನ್ನು ಕೊಂಡುಕೊಳ್ಳಬೇಕಾದರೆ ಸ್ಟೋರ್ಸ್ ಪರ್ಚೇಸ್ ಕಮಿಟಿಗೆ ಬರೆದು ಅವರು ಟೆಂಡರುಗಳನ್ನು ಕರೆದು ಅವುಗಳಲ್ಲಿ ಒಂದು ಅಂಗೀಕರಿಸಲ್ಪಟ್ಟು ಆ ಪದಾರ್ಥವನ್ನು ತರಿಸುವ ಹೊತ್ತಿಗೆ ಪೇಟೆಯಲ್ಲಿ ಎಷ್ಟೋ ಬದಲಾವಣೆಯಾಗಿರಬಹುದು. ಇದರಿಂದ ಪದಾರ್ಥಗಳನ್ನು ಬೇಗ ತರಿಸಲು ಸಾಧ್ಯವಾಗದೇ ಇರಬಹುದು. ಪಬ್ಲಿಕ್ ಅಕೌಂಟ್ಸ್ ಕಮಿಟಿಯಲ್ಲಿ ಇಂತಹ ನಿಬಂಧನೆಗಳನ್ನು ಬದಲಾವಣೆ ಮಾಡಬೇಕೆಂದು ಹೇಳಿದರೂ ಕೂಡ ಮಾಡಲಿಲ್ಲ, ಸರ್ಕಾರದ ಹಣದ ಸುರಕ್ಷತೆಯ ದೃಷ್ಟಿಯಿಂದ ಹೀಗೆ ಮಾಡಲು ಸಾಧ್ಯವಿಲ್ಲವೆಂದು ಹೇಳಿದರು. ಈಗ ಮಂಡ್ಯದ ಸಕ್ಕರೆ ಕಾರ್ಖಾನೆಯನ್ನು ಉದಾಹರಣೆಗೆ ತೆಗೆದುಕೊಳ್ಳೋಣ, ಅದು ಜಾಯಿಂಟ್‌ಸ್ಟಾಕ್ ಕಂಪೆನಿಯಾಗಿದ್ದು ಸರ್ಕಾರದ ಆಡಳಿತವೂ ಇರುವುದರಿಂದ ಹೆಚ್ಚು ಲಾಭದಾಯಕವಾಗಿ ಕಾರ್ಯದಕ್ಷತೆಯಿಂದ ಕೆಲಸ ಮಾಡುತ್ತಿದೆ. ಹಾಗೆಯೇ ಮೈಸೂರು ದೇಶದ ಅನೇಕ ಕೈಗಾರಿಕೆಗಳನ್ನು ಸಾರ್ವಜನಿಕರಿಗೆ ಬಿಟ್ಟುಕೊಟ್ಟು ಅವುಗಳಲ್ಲಿ ಈ ಸರ್ಕಾರದವರು ಹಾಕಿರುವ ಹಣವನ್ನು ಷೇರು ರೂಪದಲ್ಲಿಟ್ಟು ತಮ್ಮ ಆಡಳಿತದಲ್ಲಿಟ್ಟುಕೊಂಡು ನಡೆಸುವುದರಿಂದ ಸರ್ಕಾರಕ್ಕೆ ಬರುವ ಆದಾಯವೂ ಬಂದು ಸಾರ್ವಜನಿಕರ ಹಣವೂ ಸೇರಿ ಜಾಯಿಂಟ್‌ಸ್ಟಾಕ್ ಕಂಪೆನಿಗಳಿಗೆ ದೊರಕುವ ಅಧಿಕಾರಗಳೂ ದೊರಕಿ ಅನುಕೂಲವಾಗಬಹುದೆಂದು ನನಗೆನಿಸುತ್ತದೆ. ಹಾಗೆಯೇ ಬಸ್ಸುಗಳ ರಾಷ್ಟ್ರೀಕರಣ ಮಾಡುವುದಕ್ಕೆ ಹೊರಟು ಅದರಿಂದ ನಮಗಾಗುವ ನಷ್ಟ ಹಾಗಿರಲಿ ಸಾರ್ವಜನಿಕರಿಗೆ ಎಷ್ಟು ಅನಾನುಕೂಲವಾಗುತ್ತಿದೆಯೆಂಬುದನ್ನು ನಾನು ಬೇರೆ ಹೇಳಬೇಕಾಗಿಲ್ಲ. ಈ ಹೊತ್ತು ಹೊರಟ ಬಸ್ಸು ತಲಪಬೇಕಾದ ಸ್ಥಳಕ್ಕೆ ಸುರಕ್ಷಿತವಾಗಿ ಸಾಯಂಕಾಲವಾದರೂ ಸೇರುತ್ತದೆಂಬ ನಂಬಿಕೆಯೇ ಇಲ್ಲದಂತಾಗಿದೆ.

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು (ಹಣಕಾಸಿನ ಮತ್ತು ಕೈಗಾರಿಕೆ ಸಚಿವರು).—ಬಸ್ಸುಗಳ ಸಂಬಂಧವಾಗಿ ಬೇರೆ ಡಿಮ್ಯಾಂಡ್ ಇದೆ. ಅದನ್ನು ತೆಗೆದುಕೊಂಡಾಗ ಮಾತನಾಡಬಹುದು.

ಶ್ರೀ ಎ. ಭೀಮಪ್ಪನಾಯಕರು.—ಕೈಗಾರಿಕೆಗಳ ಸಂಬಂಧದಲ್ಲಿ ನಾನು ಇದನ್ನು ಉದಾಹರಣೆಗೆ ತೆಗೆದುಕೊಳ್ಳುತ್ತಿದ್ದೇನೆ. ಬಸ್ಸುಗಳಿಗೆ ಬೇಕಾಗುವ ಕೆಲವು ವಸ್ತುಗಳು ಇದರ ವರ್ಕ್‌ಷಾಪಿನಲ್ಲಿ ತಯಾರಾಗುತ್ತವೆ. The Workshop is a part of the Transport Company and it is an Industry.

ಅಧ್ಯಕ್ಷರು.—ಅದಕ್ಕೇ ಬೇರೆ ಖೋತಾ ಸೂಚನೆ ಇದೆ, ಆಗ ಹೇಳಬಹುದು.

ಶ್ರೀ ಎ. ಭೀಮಪ್ಪನಾಯಕರು.—ಇವನ್ನೆಲ್ಲಾ ಜಾಯಿಂಟ್ ಸ್ಟಾಕ್ ಕಂಪೆನಿಗಳನ್ನಾಗಿ ಮಾಡಿ ಸರ್ಕಾರದ ಹಿಡುವಳಿಯನ್ನು ಇಟ್ಟುಕೊಂಡು ಸಾರ್ವಜನಿಕರಿಗೂ ಉತ್ತೇಜನ ಕೊಟ್ಟು ಅವರೂ ಹಣವನ್ನು ಹಾಕುವ ಹಾಗೆ ಮಾಡಿ ಆ ಕೈಗಾರಿಕೆಗಳನ್ನು ಬೆಳೆಸಬೇಕೆಂದು ಹೇಳುವಾಗ ಇದನ್ನೆಲ್ಲಾ ಹೇಳುತ್ತಿದ್ದೇನೆ. ಕೆಲವು ಕೈಗಾರಿಕೆಗಳನ್ನು, ಎಂದರೆ, ಬೇಸಿಕ್ ಕೈಗಾರಿಕೆಗಳು ಕೆಲವನ್ನು ಸರ್ಕಾರದವರೇ ಇಟ್ಟುಕೊಂಡು ಬೆಳೆಸುತ್ತಾ ಬನ್ನಿ, ಇನ್ನು ಕೆಲವನ್ನು ಸಾರ್ವಜನಿಕರಿಗೆ ಕೊಡಿ ಎಂಬುದು ಅನೇಕರ ಅಭಿಪ್ರಾಯ. ಹೀಗೆ ಹೇಳುವುದರಲ್ಲಿ ಕೆಲವರಿಗೆ ಸರ್ಕಾರದವರು ಏನು ಮಾಡುತ್ತಾರೋ, ಖಾಸಗಿಯವರಿಗೆ ಯಾರಿಗೆ ಹೇಗೆ ಕೊಟ್ಟುಬಿಡುತ್ತಾರೋ ಎಂಬ ಭಯವಿರುವಂತೆ ಕಾಣುತ್ತದೆ.

ಇದಾಗದೆ ಸಾರ್ವಜನಿಕರಿಗೆ ಸಾರ್ವಜನಿಕವಾಗಿಯೇ ಕರೆಸಿ ಅದನ್ನು ಸರಿಯಾದ ರೀತಿಯಲ್ಲಿ ಅಭಿವೃದ್ಧಿಪಡಿಸುವುದಕ್ಕೆ ಯೋಜನೆಯನ್ನು ಹಾಕಿ goodwill ವಗೈರೆಗಳನ್ನೂ ಲೆಕ್ಕಹಾಕಿ ಮಾಡುವುದಾದರೆ, ಅದರಿಂದ ಸಾರ್ವಜನಿಕರ ಹಣ ಹೆಚ್ಚು ಹೆಚ್ಚಾಗಿ ಸೇರುವುದಕ್ಕೆ ಅವಕಾಶವಾಗುವುದೇ ಅಲ್ಲದೆ, ಆ ಕೈಗಾರಿಕೆಗಳು ಇನ್ನೂ ಅಭಿವೃದ್ಧಿಗೆ ಬಂದು ಹೆಚ್ಚಿಗೆ ಲಾಭದಾಯಕವೂ ಆಗುತ್ತವೆ. ಈ ಪ್ರಕಾರ ದೇಶದ ಕೈಗಾರಿಕೆಗಳು ಚೆನ್ನಾಗಿ ಬೆಳೆಯುವುದಕ್ಕೂ ಅವಕಾಶವಾಗುತ್ತದಲ್ಲದೆ ಇನ್ನೂ ಹೊಸ ಹೊಸ ಕೈಗಾರಿಕೆಗಳನ್ನು ಬೆಳೆಸುವುದಕ್ಕೂ ಅನುಕೂಲವಾಗುತ್ತದೆಂದು ನಾನು ಭಾವಿಸುತ್ತೇನೆ. ಸಾಧಾರಣವಾಗಿ ನಮ್ಮ ದೇಶವನ್ನೇ ಒಂದು welfare state ಎಂದು ಭಾವಿಸುವುದಾದರೆ, ಇಲ್ಲಿ ಎಲ್ಲರ ಕ್ಷೇಮ ಸಾಧನೆಯೂ ಆಗಬೇಕಾದರೆ ಸಾರ್ವಜನಿಕರೂ, ಸರ್ಕಾರದವರೂ ಹೆಚ್ಚು ಹೆಚ್ಚಾಗಿ ಸೇರಿ ಎಲ್ಲರನ್ನೂ ಷೇರುದಾರರುಗಳಾಗಿ ಮಾಡಿಕೊಂಡರೆ ಒಬ್ಬ ಪ್ರೊಪ್ರೈಟರ್ ಇದ್ದು ಹಣ ಪೆಲ್ಲಾ ಅವನಿಗೊಬ್ಬನಿಗೆ ಹೋಗುತ್ತಿದ್ದಂಥಾದ್ದು ಎಲ್ಲಾ ಷೇರುದಾರರುಗಳಿಗೂ ದೊರೆಯುವಂತಾಗಿ ಪ್ರತಿಯೊಬ್ಬರಿಗೂ ಅನುಕೂಲವಾಗುತ್ತದೆ. ಇದೂ ಒಂದು ವಿಧದಲ್ಲಿ ರಾಷ್ಟ್ರೀಕರಣವೇ. ರಾಷ್ಟ್ರದ ಹಣವನ್ನೆಲ್ಲಾ ಒಂದು ಕಡೆ ಹಾಕಿ ಸರ್ಕಾರದವರು ಅದರ ಮೇಲ್ವಿಚಾರಣೆಯನ್ನಿಟ್ಟುಕೊಂಡು, ಸಾರ್ವಜನಿಕರಿಗೂ ತಕ್ಕಮಟ್ಟಿಗೆ ಮೇಲ್ವಿಚಾರಣೆಗೆ ಅವಕಾಶಕೊಟ್ಟು ನಡೆಸುವುದು ದೇಶದಲ್ಲಿ ಎಲ್ಲರಿಗೂ ಅನುಕೂಲ ಮಾಡಿದಂತಾಗುತ್ತದೆ. ಇದರಲ್ಲಿ ಬೇರೆ ಮ್ಯಾನೇಜಿಂಗ್ ಏಜೆನ್ಸಿ ಇರ

(ಶ್ರೀ ಎ. ಭೀಮಪ್ಪನಾಯಕರು).

ಬಾರದು. ಇಂಥ ಒಂದು ವಿಧವಾದ ಏರ್ಪಾಡು ಮಾಡುವುದು ದೇಶದ ಹಿತದೃಷ್ಟಿಯಿಂದ ಬಹಳ ಒಳ್ಳೆಯದಾಗುತ್ತದೆ. ಸರ್ಕಾರದವರು ಈ ಒಂದು ಸಲಹೆಯನ್ನು ಪರಿಶೀಲಿಸಬೇಕೆಂದು ಹೇಳಿ ಈ ಖೋತಾ ನಿರ್ಣಯವನ್ನು ಸಭೆಯ ಮುಂದಿಡುತ್ತೇನೆ.

Mr. SPEAKER.—Cut motion moved:-

"That the demand be reduced by Rs. 100."

ಶ್ರೀ ಎಸ್. ರಂಗರಾಯರು (ಚಿತ್ರದುರ್ಗ ಜಿಲ್ಲೆ).—ಅಧ್ಯಕ್ಷರೇ, ಶ್ರೀ ಭೀಮಪ್ಪನಾಯಕರು ತಂದಿರ ತಕ್ಕ ಖೋತಾ ನಿರ್ಣಯದಲ್ಲಿ ಅವರು ಒಂದು ಅಭಿಪ್ರಾಯವನ್ನು ಸೂಚಿಸಿದ್ದಾರೆ, ಏನೆಂದರೆ: Basic ಮತ್ತು Key ಕೈಗಾರಿಕೆಗಳನ್ನು ಅಲ್ಲದೆ ಬಾಕಿ ಕೈಗಾರಿಕೆಗಳನ್ನು ಯಾವುದಾದರೊಂದು ಕಂಪೆನಿಯನ್ನೇರ್ಪಡಿಸಿ, ಅದರಲ್ಲಿ ಸರ್ಕಾರದವರೂ ಕೆಲವು ಷೇರುಗಳನ್ನು ಖಾಸಗಿ ಬಂಡವಾಳಗಾರರಿಗೆ ಕೊಂಡು ಅದರ ಮ್ಯಾನೇಜ್‌ಮೆಂಟನ್ನು ತಾವೇ ವಹಿಸಿಕೊಡಬೇಕೆಂದು ಹೇಳಿದ್ದಾರೆ. ಆದರೆ, ಹೀಗೆ Basic ಮತ್ತು Key ಕೈಗಾರಿಕೆಗಳನ್ನು ಮಾತ್ರ ಇಟ್ಟುಕೊಂಡು ಬಾಕಿಯವೆಲ್ಲವುಗಳನ್ನೂ ಕಂಪೆನಿಗಳಿಗೆ ಕೊಡಬೇಕೆಂಬುದನ್ನು ನಾನು ವಿರೋಧಿಸುತ್ತೇನೆ. ಕಾರಣ, ತಮಗೆ ಉದಾಹರಣೆಗಾಗಿ ಎರಡು ಮೂರು ಕೈಗಾರಿಕೆಗಳ ವಿಷಯವನ್ನು ಮಾತ್ರ ಸಂಕ್ಷೇಪವಾಗಿ ಹೇಳುತ್ತೇನೆ. ಸೆಂಟ್ರಲ್ ಇಂಡಸ್ಟ್ರಿಯಲ್ ವರ್ಕ್‌ಷಾಪ್‌ಗೆ 99,000 ರೂಪಾಯಿ fixed capital ಹಾಕಿದ್ದು ಇಂದು 51,000 ರೂಪಾಯಿ ಲಾಭ ಬಂದಿದೆ. 51% ಲಾಭ ಬಂದಿದೆ. ಶೇಕಡ 10ರಂತೆ ಬಡ್ಡಿ ಕೊಡಬಹುದೆಂದು ಹೇಳಿದರೂ 100 ರೂಪಾಯಿಗಳ ಷೇರಿನ ಬೆಲೆ 510 ರೂಪಾಯಿಗಳಾಗುತ್ತದೆ. ಹಾಗೆಯೇ ಸಾಬೂನಿನ ಕಾರ್ಖಾನೆಗೆ ಫಿಕ್ಸೆಡ್ ಬಂಡವಾಳ 1,58,000 ರೂಪಾಯಿ, ಲಾಭ ಬಂದಿರುವುದು 1,61,000 ರೂಪಾಯಿ. ನೂರಕ್ಕೆ ನೂರಕ್ಕಿಂತ ಹೆಚ್ಚಿಗೆ ಲಾಭ ಬಂತು. ಶೇಕಡ 10ರಂತೆ ಬಡ್ಡಿ ಹಾಕಿದರೂ 100 ರೂಪಾಯಿಗಳ ಷೇರಿನ ಬೆಲೆ ಸಾವಿರದ ಮೇಲೆ ಹೋಗುತ್ತದೆ. ಮೈಸೂರು ಸಿಲ್ಕ್ ವೀವಿಂಗ್ ಫ್ಯಾಕ್ಟರಿಯಲ್ಲೂ $16\frac{1}{2}\%$ ಲಾಭ ಬಂದಿದೆ. ಗಂಧದ ಎಣ್ಣೆ ಫ್ಯಾಕ್ಟರಿಯಲ್ಲಿಯೂ 80% ಲಾಭ ಬರುತ್ತಿದೆ. ಇದರ ಷೇರ್ ಬೆಲೆ 800 ರೂಪಾಯಿಗೆ ಬರುತ್ತದೆ. ಆದ್ದರಿಂದ ಇಂಥ ಲಾಭ ಬರುವ ಫ್ಯಾಕ್ಟರಿಗಳನ್ನೆಲ್ಲಾ ಒಂದು ಕಂಪೆನಿಗೆ ಷೇರಿಗೆ 100 ರೂಪಾಯಿಗಳೆಂದು ಹೇಳಿ ಕೊಟ್ಟರೆ ಸರ್ಕಾರದವರಿಗೂ ಮತ್ತು ಸಾರ್ವಜನಿಕರಿಗೂ ಎಷ್ಟು ಲುಕ್ಸಾನಾಗುತ್ತದೆಯೆಂಬುದನ್ನು ಹೇಳಬೇಕಾಗಿಲ್ಲ. ಅದೇ Basic ಮತ್ತು Key ಕೈಗಾರಿಕೆಗಳನ್ನು ನೋಡುವುದಾದರೆ ಉದಾಹರಣೆಗೆ ಭದ್ರಾವತಿ ಕಬ್ಬಿಣದ ಕಾರ್ಖಾನೆ. ಇದಕ್ಕೆ 402 ಲಕ್ಷ ರೂಪಾಯಿಗಳ ಬಂಡವಾಳ ಹಾಕಿದೆ. ಇದರಲ್ಲಿ ಈಚೆಗೆ ಹಾಕಿದ ಬಂಡವಾಳವನ್ನು ಬಿಟ್ಟುಬಿಟ್ಟರೂ 292 ಲಕ್ಷ ರೂಪಾಯಿ ಬಂಡವಾಳಕ್ಕೆ 4 ಲಕ್ಷ ಮಾತ್ರ ಬಂದಿದೆ. ಲಾಭ ಬಂದಿದ್ದರೂ, ಹೆಚ್ಚೇನಲ್ಲ. ಆದರೂ ಇವು Basic ಮತ್ತು Key ಆಗಿರುವಂತಹ ಕೈಗಾರಿಕೆಗಳಾಗಿರುವುದರಿಂದ, ಎಲ್ಲಾ ಜನರಿಗೂ ಅತ್ಯಾವಶ್ಯಕವಾದ್ದರಿಂದ ಅದನ್ನು ಸರ್ಕಾರದವರು ಇಟ್ಟುಕೊಳ್ಳಲೇಬೇಕು. ಇದೇ ಸಂಬಂಧದಲ್ಲಿ ಎಲೆಕ್ಟ್ರಿಕ್ ಫ್ಯಾಕ್ಟರಿ ಮತ್ತು ಪೋರ್ಸ್ಲೈನ್ ಫ್ಯಾಕ್ಟರಿಯನ್ನು ಶ್ರೀ ಭೀಮಪ್ಪನಾಯಕರು ಸೂಚಿಸಿದರು. ನನ್ನ ಅಭಿಪ್ರಾಯದಲ್ಲಿ ಎಲೆಕ್ಟ್ರಿಕ್ ಫ್ಯಾಕ್ಟರಿಯನ್ನೂ ಕೂಡ ಸರಿಯಾಗಿ ಟೆಕ್ನಿಕಲ್ ಸಲಹೆ ಕೊಡುವವರು ಯಾರಾದರೂ ಬಂದರೆ, ಅದನ್ನೂ ಒಂದ್ ಕಂಪೆನಿಯನ್ನಾಗಿ ಪರಿವರ್ತಿಸಿ ಕೊಡುವುದು ಒಳ್ಳೆಯದು. ಇದಕ್ಕೆ $23\frac{1}{2}$ ಲಕ್ಷ ರೂಪಾಯಿಗಳ ಫಿಕ್ಸೆಡು ಬಂಡವಾಳ ಹಾಕಿದ್ದು 45,000 ರೂಪಾಯಿಗಳಷ್ಟು ನಷ್ಟವೇ ಆಗುತ್ತಿದೆ. ಆದ್ದರಿಂದ Basic ಮತ್ತು Key ಕೈಗಾರಿಕೆಗಳನ್ನಿಟ್ಟುಕೊಳ್ಳುವುದರ ಜೊತೆಗೆ ಲಾಭ ಬರುವ ಫ್ಯಾಕ್ಟರಿಗಳನ್ನು ಇಟ್ಟುಕೊಂಡು ಬಾಕಿ ಲುಕ್ಸಾನಾಗುವ ಕೈಗಾರಿಕೆಗಳನ್ನು ಸಾರ್ವಜನಿಕರಿಗೆ ಕೊಡಬಹುದೇ ಹೊರತು ಹೆಚ್ಚು ಲಾಭ ಬರುವ ಕೈಗಾರಿಕೆಗಳನ್ನೂ ಬೇರೆ ಕಂಪೆನಿಗಳಿಗೆ ಕೊಡುವುದು ಸರಿಯಲ್ಲವೆಂದು ನಾನು ಹೇಳುತ್ತೇನೆ.

Sri V. M. MASCARENHAS (Bangalore Retroceded Area—General).—Sir, while I am in general agreement with the cut motion moved by my Hon'ble friend Sri A. Bheemappa Naik, I am afraid I am not in agreement with all that he says for the simple reason that the Government the other day in this House have clearly pointed out that they are formulating a definite policy in the matter of handing over some industries to private agency. When there is that definite statement, I do not know what the cut motion aims at.

Sri K. PUTTASWAMY (Mandya District-General).—Repetition strengthens.

Sri V. M. MASCARENHAS.—I do not think so. When the Government are keenly considering the question, there is no purpose in discussing this again. I would request the Government to tell us as soon as possible what their policy in the matter is and we shall await their decision instead of discussing the subject on a cut motion at this stage.

ಶ್ರೀ ವಿ. ಎಸ್. ನಾರಾಯಣರಾಯರು (ಬೆಂಗಳೂರು ಸಿಟಿ).—ಅಧ್ಯಕ್ಷರೇ, ಈ ಖೋತಾ ನಿರ್ಣಯ ಬಂದಿರುವುದು ಮುಖ್ಯವಾಗಿ ನಮ್ಮ ಮುಖ್ಯ ಮಂತ್ರಿಗಳು ಚೇಂಬರ್ ಆಫ್ ಕಾಮರ್ಸ್‌ನಲ್ಲಿ ಭಾಷಣ ಮಾಡುತ್ತಾ ಖಾಸಗಿ ಉದ್ಯಮಕ್ಕೆ ಅನೇಕ ಸರ್ಕಾರಿ ಕೈಗಾರಿಕೆಗಳನ್ನು ಕೊಡುವುದಕ್ಕೆ ಸಿದ್ಧವಾಗಿದ್ದೇವೆಂದು ಹೇಳಿದುದರ ದೆಸೆಯಿಂದ. ಇದರಿಂದ ದೇಶದಲ್ಲಿ ಇಷ್ಟು ಕಳವಳಕ್ಕೆ ಆಸ್ಪದವಾಗಿದೆ. ಇದರ ಜೊತೆಗೆ ಕೇಂದ್ರ ಕೈಗಾರಿಕಾ ಸಚಿವರಾದ ಮಾನ್ಯ ಹರಿಕೃಷ್ಣ ಮೆಹತಾಬ್‌ರವರು ನಾವೀಗ ಯಾವುದನ್ನೂ ರಾಷ್ಟ್ರೀಕರಣ ಮಾಡುವುದಿಲ್ಲವೆಂದು ಬೇರೆ ಸೂಚಿಸಿದ್ದಾರೆ. ಆದರೆ ನಾವು ಒಂದಂಶವನ್ನು ಜ್ಞಾಪಕದಲ್ಲಿಟ್ಟುಕೊಳ್ಳಬೇಕು. ಕಾಂಗ್ರೆಸ್ಸಿನವರು ಅಧಿಕಾರಕ್ಕೆ ಬರುವುದಕ್ಕೆ ಮೊದಲು ದೇಶದಲ್ಲಿರುವ ಮುಖ್ಯ ಮುಖ್ಯ ಕೈಗಾರಿಕೆಗಳನ್ನೆಲ್ಲಾ ರಾಷ್ಟ್ರೀಕರಣ ಮಾಡುತ್ತೇವೆಂದು ತತ್ವವನ್ನು ಸಾರಿ ಈ ಸ್ಥಾನಕ್ಕೆ ಬಂದಿದ್ದಾರೆ. ಅಂಥವರು ಈಗ ಈ ಸ್ಥಾನಕ್ಕೆ ಬಂದಮೇಲೆ, ನಾವು ರಾಷ್ಟ್ರೀಕರಣ ಮಾಡುವುದಿಲ್ಲವೆಂದು ಹೇಳುತ್ತಿದ್ದಾರೆ. ಆದ್ದರಿಂದ ಈಗಲಾ

ದರೂ ಸರ್ಕಾರದವರು ದೇಶದಲ್ಲಿರುವ ಮುಖ್ಯ ಕೈಗಾರಿಕೆಗಳೆಲ್ಲವನ್ನೂ ರಾಷ್ಟ್ರೀಕರಣ ಮಾಡುವುದೇ ಈ ಸರ್ಕಾರದ ಗುರಿ ಮತ್ತು ತತ್ವ ಎಂಬುದನ್ನು ಸರ್ಕಾರದವರು ನಿಸ್ಸಂದೇಹವಾಗಿ ತಿಳಿಸಬೇಕೆಂದು ಪ್ರಾರ್ಥಿಸುತ್ತೇನೆ.

ಎರಡನೆಯದಾಗಿ ಯಾರೇ ಆಗಲಿ ಖಾಸಗಿ ಉದ್ಯಮಕ್ಕೆ ಕೊಡಬೇಕೆಂದು ಕೇಳುವುದೆಲ್ಲಾ ಲಾಭದಾಯಕವಾಗಿರುವುದನ್ನು ಮಾತ್ರ. ನಷ್ಟವಾಗುವಂಥವುಗಳನ್ನು ಯಾರೂ ಕೇಳುವುದಿಲ್ಲ. ಆದ್ದರಿಂದ ಲಾಭ ಬರುವಂಥವುಗಳನ್ನು ಖಾಸಗೀ ಉದ್ಯಮಿಗಳು ತೆಗೆದುಕೊಳ್ಳುತ್ತಾರೆ, ನಷ್ಟ ಬರುವಂಥವುಗಳನ್ನು ಸರ್ಕಾರದವರೇ ನಡೆಸಿಕೊಂಡು ಬರಬೇಕೆಂದರೆ ಸರ್ಕಾರದ ಬಡ್ಜೆಟ್ಟು ಯಾವ ರೀತಿಯಾಗುತ್ತದೆಂಬುದನ್ನು ಹೇಳಬೇಕಾಗಿಲ್ಲ. ಈ ಎಲ್ಲಾ ಕಾರಣಗಳಿಂದ ನಾನು ಈ ಖೋತಾ ಸೂಚನೆಯನ್ನು ವಿರೋಧಿಸುತ್ತೇನೆ.

*ಶ್ರೀ ಎಂ. ವಿ. ಕೃಷ್ಣಪ್ಪನವರು (ಕೋಲಾರ ಜಿಲ್ಲೆ).—ಅಧ್ಯಕ್ಷರೇ, ಮೈಸೂರಿನ ಕೈಗಾರಿಕೆಗಳಿಗೆ ಅಸ್ತಿಭಾರ ಹಾಕಿದ ಸರ್. ಎಂ. ವಿಶ್ವೇಶ್ವರಯ್ಯನವರಾಗಲೀ, ಅದನ್ನು ಬೆಳೆಸಿದ ಸರ್ ಮಿರ್ಜಾ ಇಸ್ಮೈಲ್‌ರವರಾಗಲಿ ಈ ರಾಷ್ಟ್ರೀಕರಣದ ಯೋಚನೆ ಮಾಡಿರಲಿಲ್ಲ. ಸರ್ಕಾರದವರೂ ಸಾರ್ವಜನಿಕರೂ ಎಲ್ಲರೂ ಒಂದು ಎಂದು ಅವರು ತಿಳಿದುಕೊಂಡಿರಬೇಕು. ಈಗ ಪ್ರಪಂಚದಲ್ಲಿ ಎಲ್ಲಿ ನೋಡಿದರೂ ಬೇಸಿಕ್ ಮತ್ತು ಮುಖ್ಯವಾಗಿರುವಂಥ ಕೈಗಾರಿಕೆಗಳನ್ನು ಮಾತ್ರ ರಾಷ್ಟ್ರೀಕರಣ ಮಾಡುತ್ತಿದ್ದಾರೆಯೇ ಹೊರತು ದೇಶದಲ್ಲಿರುವ ಎಲ್ಲಾ ಕೈಗಾರಿಕೆಗಳನ್ನೂ ಅವರೇ ಕೈಕೊಂಡಿಲ್ಲ. ಅಲ್ಲದೆ ಸಾಬೂನಿನ ಕಾರ್ಖಾನೆ, ಸಿಲ್ಕ್‌ಫ್ಯಾಕ್ಟರಿ ಮುಂತಾದ ಪ್ರತಿಯೊಂದನ್ನೂ ಸರ್ಕಾರದವರೇ ನಡೆಸುವುದು ಒಳ್ಳೆಯದು ಎಂದರೂ ಅದು ಕಾರ್ಯತಃ ಸಾಧ್ಯವೇ ಎಂಬ ವಿಷಯವನ್ನು ಪರಿಶೀಲಿಸಬೇಕು. ಅನೇಕ ಕೈಗಾರಿಕೆಗಳು ನಮಗೆ ಹೆಚ್ಚಿನ ಲಾಭ ಕೊಡುತ್ತಿವೆ, ಅವನ್ನು ಖಾಸಗಿಯವರಿಗೆ ಕೊಡುವುದು ಸರಿಯಲ್ಲ ಎಂದು ಹೇಳಿದರು. ಸರ್ಕಾರದವರು ನಡೆಸಿಕೊಂಡು 4% ಲಾಭ ತೆಗೆದುಕೊಳ್ಳುವುದಕ್ಕೆ ಬದಲು ಅದನ್ನು ಖಾಸಗಿಯವರಿಗೆ ಕೊಟ್ಟರೆ ಒಂದಕ್ಕೆ ನಾಲ್ಕರಷ್ಟು ಆದಾಯ ಬರುವಂತೆ ಮಾಡಿಕೊಳ್ಳಬಹುದು. ಕಾರಣಾಂತರಗಳಿಂದ ನಮಗೆ ಕಡಿಮೆ ಲಾಭ ಬರುತ್ತಿದೆ. ಬಹುಶಃ ದೇಶದಲ್ಲಿ ಸೋಷಿಯಲ್ ಸ್ಟೇಟ್ ಆಫ್ ಅಫೇರ್ಸ್ ಇದ್ದರೆ ಸೋಷಿಯಲಿಸ್ಟ್ ತತ್ವದ ಸರ್ಕಾರವಿದ್ದರೆ ಈ ರಾಷ್ಟ್ರೀಕರಣನೀತಿ ಫಲಪ್ರದವಾಗಿರುತ್ತದೆಂದು ಹೇಳಬಹುದೇ ಹೊರತು ಇಲ್ಲಿ ಆಗಲಾರದೆಂದು ಹೇಳಬಹುದು.

ಒಬ್ಬ ಸದಸ್ಯರು.—ಇಲ್ಲಿ ಯಾವ ತತ್ವದ ಸರ್ಕಾರ ಇದೆ?

ಶ್ರೀ ಎಂ. ವಿ. ಕೃಷ್ಣಪ್ಪನವರು.—ಇದು ಕಾಂಗ್ರೆಸ್ ತತ್ವದ ಸರ್ಕಾರ. ಅಪ್ಪ ಹಾಕಿದ ಆಲದ ಮರವೆಂದು ನೇಣುಹಾಕಿಕೊಳ್ಳುವುದಕ್ಕೆ ಬದಲಾಗಿ, ಯಾವ ಯಾವ ಕೈಗಾರಿಕೆಗಳು ದೇಶಕ್ಕೆ ಬೇಸಿಕ್ ಮತ್ತು ಮುಖ್ಯವಾಗಿವೆಯೋ ಅಂಥವುಗಳನ್ನು ಮಾತ್ರ ಸರ್ಕಾರದವರಿಟ್ಟುಕೊಂಡು, ಮಿಕ್ಕ ಕೈಗಾರಿಕೆಗಳನ್ನು ಆದಷ್ಟುಮಟ್ಟಿಗೆ ಖಾಸಗಿಯವರಿಗೆ ವಹಿಸುವುದರಿಂದ, ಬಂಡವಾಳಮುಸುಕಿನಲ್ಲಿದ್ದು ಸಾರ್ವಜನಿಕರ ಹಣ ಹೊರಗೆ ಬಾರದೆ, ಶ್ರೀಮಂತರ ಮನೆಯಲ್ಲಿ ಸೇರಿರುವ ಹಣವೆಲ್ಲಾ ಹೊರಗೆ ಬರುವಂತಾಗುತ್ತದೆ. ಲಕ್ಷಾಂತರ ರೂಪಾಯಿಗಳನ್ನು ಖಾಸಗೀ ಮಹನೀಯರು ಹಾಕಲು ಮುಂದೆ ಬರುತ್ತಾರೆ. ಮುಂದೆ ಬೇಕಾದರೆ ಸೋಷಿಯಲಿಸ್ಟ್ ಸರ್ಕಾರ ಬಂದಾಗ ಸುಲಭವಾಗಿ ಅವನ್ನು ವಶಪಡಿಸಿಕೊಳ್ಳಬಹುದೆಂದು ನಾನು ಹೇಳುತ್ತೇನೆ.

ಶ್ರೀ ಎಚ್. ಸಿದ್ದವೀರಪ್ಪನವರು (ಚಿತ್ರದುರ್ಗ ಜಿಲ್ಲೆ).—ಈ ವಿಚಾರದಲ್ಲಿ ನನ್ನ ವಿರೋಧವಿರತಕ್ಕ ಬಗ್ಗೆ ನಾನು ಎರಡು ಮಾತುಗಳನ್ನು ಹೇಳಬೇಕೆಂದಿದ್ದೇನೆ. ಹೀಗೆ ನಾನು ವಿರೋಧಿಸಲು ಕಾರಣವೇನೆಂದರೆ ನಮ್ಮ ಸರ್ಕಾರದವರು ಈ ಕಾರ್ಖಾನೆಗಳನ್ನು ಹಿಂದೆ ಸ್ಥಾಪಿಸತಕ್ಕ ಕಾಲದಲ್ಲಿ ಮತ್ತು ಅಲ್ಲಿಂದ ಇಂದಿನತನಕ ಬಹಳ ಕಷ್ಟಪಟ್ಟಿದ್ದಾರೆ. ಹಾಗೆ ಅವರು ಎಷ್ಟು ಕಷ್ಟಪಟ್ಟು ಇವುಗಳನ್ನೆಲ್ಲಾ ಸ್ಥಾಪನೆ ಮಾಡಿದ್ದರೆಂಬ ಬಗ್ಗೆ ಒಂದು ಚರಿತ್ರೆಯೇ ಇದೆ. ಹಾಗೆಲ್ಲ ಕಷ್ಟಪಟ್ಟು ಮಾಡಿದಂಥ ಆಸ್ತಿಗಳನ್ನು ತಾವು ಈ ದಿವಸ ಯಾರಿಗೋ ಖಾಸಗೀ ಜನರಿಗೆ ಯಾವುದೋ ದೇಶದವರಿಗೆ ಕೊಟ್ಟುಬಿಡಬೇಕೆಂಬ ತಮ್ಮ ಅಭಿಪ್ರಾಯವನ್ನು ಎಷ್ಟು ಮಾತ್ರಕ್ಕೂ ನಾವು ಒಪ್ಪುವುದಕ್ಕಾಗುವುದಿಲ್ಲ. ತಾವಾದರೂ ಸಹ ಏತಕ್ಕಾಗಿ ಹೀಗೆ ಅಭಿಪ್ರಾಯಪಟ್ಟಿದ್ದೀರೋ ಅದು ನಮಗೆ ಎಳ್ಳಷ್ಟೂ ಗೊತ್ತಾಗುತ್ತಿಲ್ಲ. ಈ ವಿಚಾರ ಈಗಾಗಲೆ ಮೊನ್ನೆ ನಡೆದ ಬಡ್ಜೆಟ್ ಭಾಷಣಗಳ ಕಾಲದಲ್ಲೂ ಸಹ ಬಂದಿರುತ್ತೆ. ಆದರೆ ಸರ್ಕಾರದವರು ಈ ಬಗ್ಗೆ ಏನನ್ನೂ ಹೇಳದೆ ಸುಮ್ಮನಿರುತ್ತಾರೆ. ಹಾಗೊಂದು ವೇಳೆ ಕೆಲ ಕೆಲವು ಕೈಗಾರಿಕಾ ಕಾರ್ಖಾನೆಗಳು ಸರಿಯಾಗಿ ಕೆಲಸ ನಡೆಸದೆ, ಆದಾಯ ಕಮ್ಮಿ ಆಗಿದ್ದರೂ ಆಗಿರಬಹುದು-ಅಷ್ಟಕ್ಕಾಗಿಯೇ ಹೀಗೆ ಅವುಗಳನ್ನು ಕೈಬಿಟ್ಟು ಬಿಡಬೇಕೆಂಬುದು ಸರಿಯಲ್ಲ. ನಮ್ಮ ದೇಶ ಬಡರೈತರಿಂದ ಕೂಡಿರತಕ್ಕದ್ದು. ಹಾಗೆ ದೇಶದಲ್ಲಿರತಕ್ಕ ಬಡರೈತರುಗಳಿಂದ ವಸೂಲಾದಂಥ ತೆರಿಗೆ ಹಣದ ಸಹಾಯದಿಂದ ಸ್ಥಾಪಿಸಲಾದಂಥ ಕೈಗಾರಿಕೆಗಳು ಇವು. ಇವುಗಳ ಮೇಲೆ ಇಂದು ದೇಶದ ಜನರೆಲ್ಲರ ದುಡ್ಡೂ ಬಿದ್ದಿದೆ. ಹಾಗೆ ದೇಶದ ಎಲ್ಲಾ ಜನರ ದುಡ್ಡಿನಿಂದ ಸ್ಥಾಪಿತವಾದಂಥ ಕೈಗಾರಿಕೆಗಳ ವಿಚಾರದಲ್ಲಿ ತಾವು ಏಕಾಏಕಿ ಕೈಹಾಕತಕ್ಕದ್ದು ಸರಿಯಲ್ಲ, ನ್ಯಾಯವಾದ್ದಲ್ಲ ಎಂಬುದೇ ನನ್ನ ವಾದ. ಇಂದಿನ ಮಾನ್ಯ ಕೈಗಾರಿಕಾ ಮಂತ್ರಿಗಳೂ ಬಹಳ ಹಿಂದಿನಿಂದಲೂ ಈ ಶಾಸನ ಸಭೆಗಳ ಸದಸ್ಯರಾಗಿದ್ದವರು. ಅವರು ಹಿಂದೆ ಈ ಸಂಬಂಧವಾಗಿ ಭಾಷಣ ಮಾಡತಕ್ಕ ಕಾಲದಲ್ಲಿ "ಬಿಳೀ ಆನೆ, ಬಿಳೀ ಆನೆ" ಎಂಬ ಪದವನ್ನು ಭದ್ರಾವತಿ ಕಬ್ಬಿಣ ಕಾರ್ಖಾನೆ ಬಗ್ಗೆ ಉಪಯೋಗಿಸುತ್ತಿದ್ದಂಥ ಅಂಶವನ್ನು ಇಂದು ನಾವು ಆ ಹಿಂದಿನ ಪ್ರೊಸೀಡಿಂಗ್ಸ್‌ಗಳನ್ನು ತೆಗೆದು ನೋಡಿದರೆ ಗೊತ್ತಾಗುತ್ತದೆ.

(ಸಭೆಯಲ್ಲಿ ಅನೇಕ ಮಾನ್ಯ ಸದಸ್ಯರುಗಳು ಹೌದು, ಹೌದು ಎಂದು ಹೇಳುತ್ತಿದ್ದರು).

ಈ ರೀತಿ ನಮ್ಮ ಪೂರ್ವಿಕರು ಹಿಂದಿನಿಂದಲೂ ಶ್ರಮಪಟ್ಟು ಸಂಪಾದಿಸಿ ಕೊಂಡು ಬಂದಿರತಕ್ಕ ಸ್ವತ್ತುಗಳು ಇಂದು ನಮ್ಮರಾಷ್ಟ್ರದ ಸಂಪತ್ತುಗಳಾಗಿವೆ. ಆದರೆ ನಾನು ಈಗಲೇ ತಿಳಿಸುತ್ತೇನೆ, ಏನೆಂದರೆ ಮಾನ್ಯ ಮಂತ್ರಿಗಳು ಉತ್ತರ ಕೊಡತಕ್ಕ ಕಾಲದಲ್ಲಿ ಯಾವುದು ನಿಷ್ಫಲವಾದುದು ಮತ್ತು ನಿಷ್ಪ್ರಯೋಜನವಾದುದು ಎಂದು ಕಂಡುಬಂದಿರುತ್ತದೆಯೋ ಅಂಥಾದ್ದನ್ನು ಕೊಡಬೇಕೆಂಬ ಉದ್ದೇಶವಿರುತ್ತೆಂದು, ತಾವು ತಿಳಿಸಬಹುದು. ಆದರೆ ಅಂಥ ನಿಷ್ಫಲವಾದ ಅಥವಾ ನಿಷ್ಪ್ರಯೋಜನವಾದುದರ ಮೇಲೆ ಯಾರೂ ಕಣ್ಣುಹಾಕುವುದಿಲ್ಲ. ಲಾಭದಾಯಕವಾದ ಕೈಗಾರಿಕೆಗಳಾಗಿ

* Speeches asterisked have not been revised by the Hon'ble Member concerned.

(ಶ್ರೀ ಎಚ್. ಸಿದ್ದವೀರಪ್ಪನವರು).

ದ್ದರೇ ಬೇರೆಯವರು ಉತ್ತೇಜನ ಕೊಡುತ್ತಾರೆ. ಇದು ಕೇವಲ ಎಲ್ಲರಿಗೂ ಹೊಳೆಯುವಂಥ ಸಾಮಾನ್ಯ ವಿಚಾರ. ಆದರೆ ಈ ವಿಷಯವನ್ನು ಸರ್ಕಾರದವರು ಚೆನ್ನಾಗಿ ಪರಿಶೀಲನೆ ಮಾಡಬೇಕಾಗಿದೆ. ಇಂಥಾ ಸಂದರ್ಭಗಳಲ್ಲಿ ಮುಂದಾಲೋಚನೆಯಿಂದ ವರ್ತಿಸ ತಕ್ಕದ್ದು ಸೂಕ್ತವಾದದ್ದು. ಈಗಲಾದರೂ ನಾನು ಹೇಳತಕ್ಕದ್ದಿಷ್ಟೆ; ತಾವು ಈ ವಿಚಾರದಲ್ಲಿ ಕೈಹಾಕುವ ಮೊದಲು ಈ ವಿಷಯಗಳನ್ನು ಈ ಸಭೆಯ ಮುಂದೆ ಒಂದು ವಿಶೇಷ ನಿರ್ಣಯದ ರೂಪದಲ್ಲಿ ತಂದು ಇದರ ಬಗ್ಗೆ ಸರ್ವ ಸದಸ್ಯರಒಪ್ಪಿಗೆಯನ್ನು ಪಡೆದುಕೊಂಡು ನಂತರ ತಾವು ಮುಂದುವರಿಸಬಹುದೇ ಹೊರತು ಹಾಗಿಲ್ಲದೆ ತಾವು ಈ ವಿಚಾರದಲ್ಲಿ ಏಕಾ ಏಕಿ ಕೈಹಾಕಿದರೆ ತುಂಬಾ ತೊಂದರೆಗಳಾಗಬಹುದೆಂದು ನಾನು ತಿಳಿಸುತ್ತೇನೆ. ಈ ವಿಷಯದಲ್ಲಿ ಸಾರ್ವಜನಿಕರು ತುಂಬಾ ಕಳವಳಕ್ಕೀಡಾಗಿದ್ದಾರೆ.

Sri G. A. ACHARYA (Bangalore District—General).—Sir, I support the cut motion moved by Sir A. Bheemappa Naik. The principle underlying the cut motion seems to be this. Sri H. Siddaveerappa is saying that there will be an uproar in the minds of the public if we were to hand over these industries to private enterprise. I do not agree with that Sir. Apart from that, let me say Sir, that the industries owned by Government, although they are running for a number of years, are not producing as much as they ought to. Take any industry and compare the production figures. As a matter of fact though it is not concerned here, I remember the Hon'ble Finance Minister saying two or three years ago that he would be going to manufacture 7,000 tons of soap but the production actually is hardly 500 to 700 tons to-day.

The Hon'ble Sri H. C. DASAPPA.—The Hon'ble Finance Minister never said that.

Sri G. A. ACHARYA.—Sir, I maintain that some two years ago before the Public Accounts Committee, the Finance Minister was asserting that he would be going to produce 7,000 tons.

The Hon'ble Sri H. C. DASAPPA.—It is not correct.

Sri G. A. ACHARYA.—Very well, Sir, if it is not correct, I withdraw. If it is correct and if you are convinced about it after reading the relative reports, the Hon'ble Minister can withdraw mentally.

Any way Sir, I am of the opinion that it is in the interest of Mysore economy that such of these industries which can be managed by public enterprise may be handed over to them. What prompts me to say this, perhaps my Hon'ble friends would like to know. It is not that I am very anxious to see that industries which are really very profitable to Government and through which Government get some money are transferred to private hands. But having regard to our finances and looking to the high percentage of the money that we have to spend on social services in the State, I say it is not at all possible to finance all industries except the basic and key industries. There seems to be a mentality in this country that people are different from Government and that Government are different from people..........

Sri H. SIDDAVEERAPPA (Chitaldrug District—General) Who said that? Question! (There was widespread comment in the House and disturbance).

Sri G. A. ACHARYA.—Well, that mentality must go. It is not that I say that private people alone can manage the industries better than Government and therefore the industries should be transferred. It is not that Government are absolutely incompetent to run these industries. I have said before and I do say now also that the Government have better work to do than running these industries. Making soaps and electric motors is not the business of the Government. By all means I say that the Iron and Steel industry should continue in Government hands even if it were to run under loss because it should not be considered on the profit motive. There are certain industries which are absolutely essential for the country at large and therefore I say that such industries may be kept in Government hands. But I warn the Government also, take it for what it is worth, if they go on as they are going on now, it will not be possible for them to finance many of the industries which they have set up.

Sri H. SIDDAVEERAPPA.— If the Government cannot finance, how can a private individual finance? Government

are more powerful and in better position to finance than individuals ?

Sri G. A. ACHARYA.—Sir, I may have other occasions to say how money can be got from the people and whether Government alone can get money to finance industries.

Now, as a matter of fact, industries were started to demonstrate to the lazy people how to do certain things. And when they were shy of coming forward with money to start industries, Government used to give them some plans and also technical assistance. The motive with which Government started industries in the State of Mysore was to make the people understand that they have got to work. As a matter of fact even the Government Soap Factory was started with a view to make other people start similar factories. It was more or less on demonstrative lines that these industries were started. Any way this much I can say that consistent with our finances to-day, it is not at all desirable and it will not be in the best interests of the economy of Mysore State that the Government should invest or run industries where I find hardly any percentage of profit. As a matter of fact just after five years I do not know what exactly the Central Government will have to say in regard to State controlled industries in respect of several taxes and if income-tax were to be levied on the profits of our Government concerns, perhaps the balance sheet would take quite a different shape from what it is to-day. Anyway Sir, I do think that it would be in the interests of the State alone that they forthwith do make arrangements to transfer such industries as they think fit to private enterprise.

ಶ್ರೀ ಎಂ. ಎನ್. ಜೋಯಿಸರು (ಮೈಸೂರು ಜಿಲ್ಲೆ).—ಸ್ವಾಮಿ, ಈ ಖೋತಾ ನಿರ್ಣವು ಸಭೆಯ ಮುಂದೆ ಬಂದಿರತಕ್ಕ ಕಾರಣವಾದರೂ, ಸರ್ಕಾರದ ಆಡಳಿತದಲ್ಲಿರತಕ್ಕ ಈ ಕೈಗಾರಿಕೆಗಳು ದಕ್ಷತೆಯಿಂದ ನಡೆಸುತ್ತಿಲ್ಲವೆಂಬುದನ್ನು ತಿಳಿಸತಕ್ಕದ್ದೇ ಎಂದು ಕಾಣುತ್ತದೆ.

ಅಧ್ಯಕ್ಷರು.—ಅವರು ಹಾಗೆ ಹೇಳಿರುವುದಿಲ್ಲ.

ಶ್ರೀ ಎಂ. ಎನ್. ಜೋಯಿಸರು.—ಆದರೆ ಸಭೆಯಲ್ಲಿ ಕೆಲವರು ಮಾಡಿದ ವಾದ ಆ ರೀತಿ ಇತ್ತು. ಶ್ರೀಮಾನ್ ಜಿ. ಎ. ಆಚಾರ್ಯರವರು ಹೇಳಿದ ಹಾಗೆ ಹೆಚ್ಚಾಗಿ ದುಡ್ಡನ್ನು ಹಾಕಲು ಇವರಿಗೆ ಕೈಲಿ ಹಣವಿಲ್ಲ, ಈ ಕಾರಣದಿಂದ 7,000 ಟನ್ ಸೋಪು ಉತ್ಪತ್ತಿ ಮಾಡಬೇಕಾಗಿದ್ದ ಕಡೆ, 600 ಟನ್‌ಗಳನ್ನು ಉತ್ಪತ್ತಿ ಮಾಡಿದ್ದಾರೆ; ಹೀಗೆ ಇದು ಸಮರ್ಪಕವಾಗಿ ನಡೆಯುತ್ತಿಲ್ಲ ಎಂಬುದಾಗಿ ವಾದ ಮಾಡಿದ್ದಾರೆ. ಆದ್ದರಿಂದ ಸರ್ಕಾರದವರು ಇವುಗಳನ್ನು ನಡೆಸುವುದಕ್ಕೆ ಸಾಧ್ಯವಿಲ್ಲ, ಇವುಗಳನ್ನು ಖಾಸಗಿಯವರಿಗೆ ಕೊಟ್ಟುಬಿಡಬೇಕೆಂಬ ವಾದ ಅಷ್ಟು ಸರಿಯಾಗಿದ್ದಂತೆ ಕಾಣಲಿಲ್ಲ. ದಕ್ಷತೆ ಹೆಚ್ಚಿಸುವುದಕ್ಕೆ ಸರ್ಕಾರದ ಕೈಲಿ ಶಕ್ತಿಯಿದೆ, ಹೆಚ್ಚಿಸಬಹುದು. ಲಾಭದಾಯಕವಾಗಿಲ್ಲದಿದ್ದರೆ ಆ ರೀತಿ ಮಾಡುವುದಕ್ಕೆ ಮಾರ್ಗ ಕಂಡುಹಿಡಿಯಬೇಕೇ ಹೊರತು................

The Hon'ble Sri H. C. DASAPPA.—Is it open for one Hon'ble Member to interpret the mind of the Hon'ble mover and that, in a totally wrong way. If Sri Bheemappa Naik says it, I would certainly have no objection ; but let not the Hon'ble Member Sri Jois misinterpret Sri Bheemappa Naik. He can state his own views.

Sri M. N. JOIS.—I am only sorry that the Hon'ble Finance Minister is misinterpreting my mind though he does not want me to do so as regards others.

ಆ ದೃಷ್ಟಿಯಿಂದ ಸರಿಯಾದದ್ದಲ್ಲ. ಖಾಯಿಲೆ ಇದ್ದರೆ ಔಷಧಿಕೊಟ್ಟು ವಾಸಿ ಮಾಡಬೇಕೇ ಹೊರತು ಒಂದೇ ಸಾರಿ ಇಂಜಕ್ಷನ್ ಕೊಟ್ಟು ಬೇರೆ ಲೋಕಕ್ಕೆ ಕಳುಹಿಸುವುದು ಸರಿಯಾದ ಮಾರ್ಗವಲ್ಲ.

ಅಧ್ಯಕ್ಷರು.—ಅವರು ಹಾಗೆ ಹೇಳಲಿಲ್ಲ.

ಶ್ರೀ ಎಂ. ಎನ್. ಜೋಯಿಸ್‌ರವರು.—ಎರಡನೆಯದಾಗಿ ಇದರಲ್ಲಿ ಒಂದು ತತ್ವವಿದೆ. ಕೈಗಾರಿಕೆಗಳನ್ನು ಸರ್ಕಾರದವರು ನಡೆಸಬೇಕೇ ಅಥವಾ ಖಾಸಗಿಯವರಿಗೆ ಕೊಡಬೇಕೇ ಇಲ್ಲದಿದ್ದರೆ ಮುಖ್ಯ ಕೈಗಾರಿಕೆಗಳನ್ನು ಸರ್ಕಾರ ಇಟ್ಟುಕೊಂಡು ಉಳಿದುದನ್ನು ಖಾಸಗಿಯವರಿಗೆ ಬಿಟ್ಟುಕೊಡಬೇಕೇ ಎಂಬುದು ಒಂದು ಅಂಶ. ಇದುವರೆಗೆ ಯಾವ ಕೈಗಾರಿಕೆಗಳನ್ನೂ ಸರ್ಕಾರದವರೇ ಮನಾಪಲಿ ಮಾಡಬೇಕೆಂದಿಲ್ಲ. ಬೇರೆಯವರಿಗೆ ಅವಕಾಶವಿದೆ. ಬೇರೆಯವರಹಾಗೆ ಕೆಲವು ಕೈಗಾರಿಕೆಗಳನ್ನು ನಡೆಸಬಹುದು. ಇನಾಂ ಅಬಾಲಿಷನ್ ಬಿಲ್, ಜಹಗೀರ್ ಅಬಾಲಿಷನ್‌ಬಿಲ್, ಟೆನೆನ್ಸಿ ಬಿಲ್, ಕಲ್ಟಿವೇಷನ್ ಆಫ್ ಫ್ಯಾಲೋಲ್ಯಾಂಡ್ಸ್ ಬಿಲ್ ಹೀಗೆ ಅನೇಕ ಬಿಲ್ಲುಗಳು ಬರುತ್ತಿವೆ. ಇನ್ನೊಂದು ಕಡೆ ಇರುವ ಕೈಗಾರಿಕೆಗಳನ್ನು ಬೇರೆಯವರಿಗೆ ಕೊಡಬೇಕೆಂದಿದೆ. ಇದು ವಿರೋಧಾಭಾಸ ತತ್ವ ದೃಷ್ಟಿಯಿಂದ ಯಾವ ತತ್ವವನ್ನೂ ಪ್ರತಿಪಾದನೆ ಮಾಡಿದ ಹಾಗೆ ಕಾಣುತ್ತಿಲ್ಲ. ಆದ್ದರಿಂದ ಸ್ಪಷ್ಟವಾಗಿ ಎಲ್ಲಾ ಕೊಡುತ್ತೇವೆಂಬ ತತ್ವ ಪ್ರತಿಪಾದನೆಯಾಗಬೇಕು ಅಥವಾ ಮುಖ್ಯ ಕೈಗಾರಿಕೆಗಳನ್ನು ಮಾತ್ರ ಇಟ್ಟುಕೊಳ್ಳಬೇಕೆಂಬ ತತ್ವವಾದರೂ ಪ್ರತಿಪಾದನೆಯಾಗಬೇಕು. ಭೂಮಿ ಹಂಚಿಕೆ ಒಂದು ಕಡೆ ಮಾಡಬೇಕೆಂದು ಹೇಳುವುದು, ಇನ್ನೊಂದು ಕಡೆ ಕೈಗಾರಿಕೆಗಳನ್ನು ನಾಲ್ಕಾರು ಬಂಡವಾಳಸ್ಥರಿಗೆ ಕೊಡುತ್ತೇವೆನ್ನುವುದು ಖಂಡಿತ ಸರಿಯಲ್ಲ. ಈಗ ನಮ್ಮ ಹಣಕಾಸಿನ ದೃಷ್ಟಿಯಿಂದ ಯಾವುದಾದರೂ ಸ್ವಲ್ಪ ಹಣ ಬಂದರೆ ಸರ್ಕಾರಕ್ಕೆ ಹೆಚ್ಚು ಅನುಕೂಲವಾಗಬಹುದು. ಈ ದಿವಸದ ಪರಿಸ್ಥಿತಿಯಲ್ಲಿ ಒಂದು ನೀತಿಯ ಆಧಾರದ ಮೇಲೆ ಕೆಲಸ ಮಾಡಬೇಕೇ ಹೊರತು ಹೊಟ್ಟೆ ತುಂಬಿಕೊಳ್ಳುವ ನೀತಿ

(ಶ್ರೀ ಎಂ. ಎಚ್. ಜೋಯಿಸರು.)

ಯನ್ನು ಅನುಸರಿಸುವುದು ಸರಿಯಲ್ಲ. ಅದನ್ನು ಒಪ್ಪುವುದಕ್ಕಾಗುವುದಿಲ್ಲ. ಆದ್ದರಿಂದ ಯಾವ ವಿಚಾರದಲ್ಲೇ ಆಗಲಿ ಒಂದು ನೀತಿಯನ್ನು ಅನುಸರಿಸಬೇಕಾದರೆ ಅದನ್ನು ಈ ಸಭೆಯ ಮುಂದೆ ತಂದು ಒಪ್ಪಿಗೆ ಪಡೆದು ಆಮೇಲೆ ಅದನ್ನು ಕಾರ್ಯರೂಪಕ್ಕೆ ತರಬೇಕು. ಅದಕ್ಕೆ ಮೊದಲು ಏನು ಮಾಡುವುದೂ ಸರಿಯಲ್ಲ. ಇದೇ ವಿಷಯ ಪ್ರಶ್ನೋತ್ತರಗಳ ಕಾಲದಲ್ಲಿ ಬಂದಾಗ ಮಾನ್ಯ ಹಣಕಾಸಿನ ಸಚಿವರು ಕೈಗಾರಿಕಾ ಸಮಿತಿಯೊಂದಿದೆ. ಅದರ ಮುಂದೆ ಈ ವಿಚಾರವನ್ನು ತಂದು ತೀರ್ಮಾನ ಮಾಡುತ್ತೇವೆಂದು ಹೇಳಿದ್ದರು. ಅದನ್ನು ಈ ಸಂದರ್ಭದಲ್ಲಿ ಜ್ಞಾಪಕಮಾಡಿಕೊಳ್ಳಬೇಕು.

*ಶ್ರೀ ಕಡಿದಾಳ್ ಮಂಜಪ್ಪನವರು (ಶಿವಮೊಗ್ಗ ಜಿಲ್ಲೆ).—ಸ್ವಾಮಿ, ಈ ಕತ್ತರಿ ನಿರ್ಣಯದ ಮೇಲೆ ನನಗೆ ಮಾತನಾಡಬೇಕೆಂಬ ಇಷ್ಟವಿರಲಿಲ್ಲ. ಆದರೆ ಶ್ರೀ ಕೃಷ್ಣಪ್ಪನವರು ಬಂಡವಾಳಶಾಹಿನೀತಿಯ ವಿಚಾರದಲ್ಲಿ ಅನುಮಾನ ಬರುವ ಹಾಗೆ ಹೇಳಿದ್ದನ್ನು ಸ್ಪಷ್ಟಪಡಿಸಬೇಕಾಯಿತು. ಬಹುಶಃ ಬೇರೆ ಸರ್ಕಾರ ಬಂದರೂ ಇದಕ್ಕಿಂತ ಸಮಾಜವಾದಿ ತತ್ವವನ್ನು ಹೆಚ್ಚಾಗಿ ಆಚರಣೆಗೆ ತರುವುದಕ್ಕೆ ಸಾಧ್ಯವಿಲ್ಲ ಎಂದು ಸ್ಪಷ್ಟವಾಗಿ ಹೇಳುತ್ತೇನೆ. ಒಂದು ಮಾತು ಈ ವಿಚಾರದಲ್ಲಿ ಹೇಳುವುದಾದರೆ ಈಗ ದೇಶದಲ್ಲಿರುವ ಪರಿಸ್ಥಿತಿಯಲ್ಲಿ ನಮ್ಮ ಕೈಗಾರಿಕೆಗಳನ್ನು ರಾಷ್ಟ್ರೀಕರಣ ಮಾಡಬೇಕಾದರೆ ಕೈಗಾರಿಕೆಗಳಲ್ಲಿ ಕೆಲಸ ಮಾಡುವ ನೌಕರರು, ಕಾರ್ಮಿಕರು ಮುಂತಾದವರಿಗೆ ದೇಶಾಭಿಮಾನದಿಂದ, ಶಿಸ್ತಿನಿಂದ ಮತ್ತು ದಕ್ಷತೆಯಿಂದ ಕೆಲಸಮಾಡಬೇಕೆಂಬ ಒಂದು ಭಾವನೆ ಬರುವವರೆಗೆ ಮಾಡಬಾರದು. ಹಾಗೆ ಮಾಡುವುದು ಸರಿಯಲ್ಲ. ಸುಮ್ಮನೆ ರಾಷ್ಟ್ರೀಕರಣ ಮಾಡಬೇಕೆಂಬ ದೃಷ್ಟಿಯಿಂದ ಮಾಡಿದರೆ ದೇಶಕ್ಕೆ ಹಾನಿಯಾಗಬಹುದು ಎಂದು ಹೇಳುತ್ತೇನೆ.

ಶ್ರೀ ಟಿ. ಸುಬ್ರಹ್ಮಣ್ಯರವರು (ತುಮಕೂರು ಜಿಲ್ಲೆ).—ಅಧ್ಯಕ್ಷರೇ, ಈಗ ಚರ್ಚೆಯಾಗುತ್ತಿರುವ ವಿಷಯವು ಕೆಲವು ಗಹನವಾದ ತತ್ವಗಳನ್ನೊಳಗೊಂಡಿದೆ. ಕೈಗಾರಿಕೆಗಳ ರಾಷ್ಟ್ರೀಕರಣವೆಂಬುದು ಈಗ ಸರ್ಕಾರದ ಆಡಳಿತಕ್ಕೊಳಪಟ್ಟಿರುವ ಕೆಲವು ಕೈಗಾರಿಕೆಗಳಿಗೆ ಅನ್ವಯಿಸುತ್ತದೆಯೇ ಹೊರತು ಬಾಕಿಯಾದ್ದಕ್ಕೆ ಅನ್ವಯಿಸುವುದಿಲ್ಲ, ಸರ್ಕಾರದ ಅಧೀನದಲ್ಲಿ ಇಲ್ಲದಿರುವುದಕ್ಕೆ ಅನ್ವಯಿಸುವುದಿಲ್ಲ ಎಂದು ನನಗೆ ಕಾಣುತ್ತದೆ. ಶ್ರೀ ಭೀಮಪ್ಪನಾಯಕರು ಹೇಳಿದ ಹಾಗೆ ಮುಖ್ಯವಾದ ಕೈಗಾರಿಕೆಗಳನ್ನು ಇಟ್ಟುಕೊಂಡು ಬಾಕಿಯಾದ್ದನ್ನು ಖಾಸಗೀ ಜನರ ಹಸ್ತಗತ ಮಾಡಿದರೆ ಹಿಂಸೆ ನಮಗೆ ತಪ್ಪುವುದಿಲ್ಲ. ಬಹಳ ಕಷ್ಟಪಟ್ಟು ಪೂರ್ವೀಕರು ಕೆಲವು ಕೈಗಾರಿಕೆಗಳನ್ನು ಸ್ಥಾಪನೆ ಮಾಡಿದ್ದಾರೆ. ಅವು ಈಗ ಚೆನ್ನಾಗಿ ಕೆಲಸ ಮಾಡುತ್ತಿವೆ. ಒಂದು ವೇಳೆ ಆ ರೀತಿ ಮಾಡುತ್ತಿಲ್ಲ ಎಂದು ಕಂಡುಬಂದರೆ ಚೆನ್ನಾಗಿ ಕೆಲಸ ಮಾಡುವಂತೆ ಮಾಡುವುದಕ್ಕೆ ಪ್ರಯತ್ನ ಮಾಡಬೇಕೇ ಹೊರತು ಅವನ್ನೆಲ್ಲಾ ಬೇರೆಯವರ ಕೈಗೆ ಕೊಡುವುದು ಸರಿಯಾದ ಮಾರ್ಗವಲ್ಲ ಎಂದು ಹೇಳುತ್ತೇನೆ. ಸರ್ಕಾರದವರು ಬೇಕಾದಷ್ಟು ಹಣ ಕೊಟ್ಟು ಆ ಕೈಗಾರಿಕೆಗಳನ್ನು ಮೊದಲಿನಿಂದಲೂ ನಡೆಸಿಕೊಂಡು ಬಂದಿದ್ದಾರೆ. ಹಾಗಿರುವಾಗ ಅವನ್ನು ಸರಿಯಾದ ವ್ಯವಸ್ಥೆಯಿಂದ ನಡೆಸಬೇಕು ಈಗ ಹಾಗೆಯೇ ಮಾಡುತ್ತಿದ್ದರೂ ಸ್ವಲ್ಪ ಅವ್ಯವಸ್ಥೆಯಿರಬಹುದು, ಅದನ್ನು ಸರಿಪಡಿಸಬೇಕೇ ಹೊರತು ಬೇರೆಯವರಿಗೆ ಕೊಡಬಾರದು.

ಇನ್ನೊಂದು ವಿಚಾರ. ಯಾವ ಕೈಗಾರಿಕೆಯೇ ಆದರೂ ಹಣದ ಅನುಕೂಲತೆಯಿರುವ ಬಂಡವಾಳಸ್ಥರಿಗೇ ಸೇರುತ್ತದೆ. ನಾನು ಈ ದಿವಸ ಒಂದು ಷೇರು ತೆಗೆದುಕೊಂಡರೂ ಅದು ಬಂಡವಾಳಸ್ಥರಿಗೇ ಹೋಗುತ್ತದೆ. ಸಕ್ಕರೆ ಕಂಪೆನಿ ತೆಗೆದುಕೊಂಡರೆ ಅದರಲ್ಲಿ ಶೇಕಡ 51 ಭಾಗ ಮಾತ್ರ ಮೈಸೂರು ಸರ್ಕಾರದ್ದು, ಹೊರಗಿನವರದು ಶೇಕಡ 42 ಷೇರುಗಳಿರಬಹುದು. ಅದೂ ಬೊಂಬಾಯಿ ಮುಂತಾದ ಕಡೆಯವರಿಗೆ ಸೇರಿದೆ. ಹೀಗೆ ಬಂಡವಾಳಸ್ಥರಿರುವ ಕಡೆ ಈ ಷೇರುಗಳೂ, ಮೈಸೂರು ದೇಶದ ಎಲ್ಲಾ ಕೈಗಾರಿಕೆಗಳೂ ಹೊರಗಿನವರಿಗೇ ಬಹುಶಃ ಸೇರಬಹುದು. ಅದಕ್ಕೆ ಅವಕಾಶ ಮಾಡುವುದು ಸರಿಯಲ್ಲ.

ಎರಡನೆಯದಾಗಿ ಕೈಗಾರಿಕೆಗಳನ್ನು ಹೊಸದಾಗಿ ಪ್ರಾರಂಭಿಸಬೇಕಾಗಿಲ್ಲ. ಏಕೆಂದರೆ ಹಣವಿಲ್ಲ. ಇರುವುದನ್ನು ಹೇಗಾದರೂ ಮಾಡಿ ಮುಂದುವರಿಸಲು ಪ್ರಯತ್ನ ಮಾಡಬೇಕೆಂಬ ಅಭಿಪ್ರಾಯವಿದೆ. ಹೊಸದಾಗಿ ಮಾಡುವುದಕ್ಕೆ ಬೇರೆಯವರಿಗೆ ಪ್ರೋತ್ಸಾಹ ಕೊಡಿ, ಅವರು ಪ್ರಾರಂಭಿಸಲಿ. ಈಗ ನಡೆಸುತ್ತಿರುವ ಕೈಗಾರಿಕೆಗಳನ್ನು ಮಾತ್ರ ಬೇರೆಯವರ ಕೈಗೆ ಕೊಡಬಾರದು. ಹಾಗೆ ಮಾಡುವುದು ಷಾರ್ಟ್‌ಸೈಟೆಡ್ ಪಾಲಿಸಿ. ಅದರಿಂದ ಉಪಯೋಗವಾಗುವುದಿಲ್ಲ.

ಶ್ರೀ ಎಂ. ಗೋವಿಂದರೆಡ್ಡಿಯವರು (ಚಿತ್ರದುರ್ಗ ಜಿಲ್ಲೆ).—ಈ ಖೋತಾ ನಿರ್ಣಯಕ್ಕೆ ಸಂಬಂಧಪಟ್ಟ ಪ್ರಶ್ನೆಯನ್ನು ಬಹಳ ದೂರದೃಷ್ಟಿಯಿಂದ ವಿಚಾರ ಮಾಡಬೇಕಾಗಿದೆ. ಕೇವಲ ಲಾಭದ ದೃಷ್ಟಿಯಿಂದ ಅಥವಾ ವರಮಾನದ ದೃಷ್ಟಿಯಿಂದ ಸರ್ಕಾರದವರು ಪ್ರಾರಂಭ ಮಾಡಿರುವ ಕೈಗಾರಿಕೆಗಳನ್ನು ಖಾಸಗಿಯವರಿಗೆ ಕೊಡುವಂತೆ ಕಾಣುತ್ತದೆ. ಆದರೆ ಇದು ಲಾಭದ ದೃಷ್ಟಿಯಿಂದ ನೋಡತಕ್ಕ ಪ್ರಶ್ನೆಯಲ್ಲ. ಇದನ್ನು ಸಾರ್ವಜನಿಕರ ದೃಷ್ಟಿಯಿಂದ ನೋಡಬೇಕು. ಇದೇ ಈಗ ಪ್ರಪಂಚದ ಎಲ್ಲಾ ದೇಶಗಳೂ ಅನುಸರಿಸುತ್ತಿರುವ ತತ್ವ. ಸಮಾಜದ ಹಿತಕ್ಕೆ ಕುಂದುಕಬಾರದ ಹಾಗೆ ಮಾಡಬೇಕು. ಸಮಾಜದ ನಿತ್ಯ ಉಪಯೋಗಕ್ಕೆ ಬೇಕಾಗುವ ಸಾಮಾನುಗಳನ್ನು ತಯಾರು ಮಾಡುವ ಎಲ್ಲಾ ಕೈಗಾರಿಕೆಗಳೂ ಸರ್ಕಾರದ ವಶದಲ್ಲೇ ಇರಬೇಕು ಎಂಬ ತತ್ವಕ್ಕೆ ಪ್ರೋತ್ಸಾಹವಿರಬೇಕು. ಬ್ರಿಟಿಷ್ ಸರ್ಕಾರ ಕಲ್ಲಿದ್ದಲು ಕೈಗಾರಿಕೆ, ಉಕ್ಕಿನ ಕೈಗಾರಿಕೆ, ಕೆಮಿಕಲ್ ಇಂಡಸ್ಟ್ರೀ ತಾನೇ ವಹಿಸಿಕೊಂಡಿದೆ. ಬೇಸಿಕ್ ಮತ್ತು ಬೇಸಿಕ್ ಅಲ್ಲದಿರುವ ಕೈಗಾರಿಕೆಗಳೂ ಇವೆ. ಇಂಡಿಯಾ ಸರ್ಕಾರದವರು ಇದನ್ನು ಚೆನ್ನಾಗಿ ಮನಗಂಡಿದ್ದಾರೆ. ಬಟ್ಟೆ ಅಭಾವ ಬಂದಾಗ ಇಂಡಿಯಾ ಸರ್ಕಾರದವರು ಮಿಲ್ಲುಗಳು ಇಂಥ ಬಟ್ಟೆ ತಯಾರು ಮಾಡಬೇಕು, ಇಷ್ಟು ಕೋಟಿ ಗಜ ಬಟ್ಟೆ ಉತ್ಪತ್ತಿ ಮಾಡಬೇಕು ಎಂದು ನಿಗದಿ ಮಾಡಿದ್ದರು. ಆದರೆ ಖಾಸಗಿ ಸಂಸ್ಥೆಗಳಿಗೆ ವಹಿಸಿದ ಕೆಲಸ ಕಾರ್ಯಗಳು ಸರಿಯಾಗಿ ನಡೆಯುವುದಿಲ್ಲ. ಏಕೆಂದರೆ ಆ ಸಂಸ್ಥೆಗಳು ಲಾಭದ ಮೇಲೆ ಗಮನವಿಡುತ್ತವೆಯೇ ಹೊರತು ಸಾರ್ವಜನಿಕರ ಹಿತದೃಷ್ಟಿಯ ಕಡೆ ನೋಡುವುದಿಲ್ಲ. ಆದ್ದರಿಂದ ಸರ್ಕಾರದವರು ಈ ರೀತಿ ವಿಧಾಯಕ ಮಾಡಿದರೂ ಮಿಲ್ಲಿನವರು ಸರ್ಕಾರದವರು ನಿಗದಿ ಮಾಡಿದ ನಂಬರು ಬಟ್ಟೆಯನ್ನೂ ಮಾಡಲಿಲ್ಲ, ಆ ನಂಬರು ನೂಲನ್ನೂ ಮಾಡಲಿಲ್ಲ. ಸರ್ಕಾರಕ್ಕೆ ಎಷ್ಟು ಬಟ್ಟೆ ಬರಬೇಕಾಗಿತ್ತೋ ಅಷ್ಟು ಉತ್ಪತ್ತಿಯಾಗಲಿಲ್ಲ. ಸರ್ಕಾರಕ್ಕೆ ಟೆಕ್ಸ್‌ಟೈಲ್ ಬಿಸಿನೆಸ್‌ನಿಂದ ತಲೆ ನೋವಾಗಿದೆ. ಮಿಲ್ಲಿನಲ್ಲಿ ಬಟ್ಟೆ ಹೆಚ್ಚಾಗಿರುವಾಗಲೂ ಉತ್ಪತ್ತಿ ಕಡಿಮೆ ತೋರಿಸಿ ಸರ್ಕಾರಕ್ಕೆ ಕೊಡದೆ ಹೊರಕ್ಕೆ ರಫ್ತು ಮಾಡುತ್ತಿರುತ್ತಾರೆ.

ಹೀಗೆ ಅವರು ತಮ್ಮ ಅನುಕೂಲ ದೃಷ್ಟಿಯಿಂದ ಲಾಭ ಹೆಚ್ಚಿಸಿಕೊಳ್ಳಲಿಕ್ಕೆ ಯಾವುದು ಬೇಕೋ ಆ ತಪ್ಪು ಲೆಕ್ಕಗಳನ್ನು ಸರ್ಕಾರದವರ ಮುಂದೆ ಇಟ್ಟು ಸರ್ಕಾರದವರು ಅವರಂತೆ ರೂಲ್ಸ್ ಮಾಡುವ ಹಾಗೆ ಮಾಡುತ್ತಾ ಇದ್ದಾರೆ. ಸರ್ಕಾರದವರಿಗೆ ಅಷ್ಟು ತಲೆ ನೋವಾಗಿದೆ. ಉದಾಹರಣೆಗಾಗಿ ಯುನೈಟೆಡ್ ಇಂಡಿಯಾ ಮಿಲ್ಸನ್ನು ಅವರೇ ನಡೆಸಿಕೊಂಡು ಬರುತ್ತಾ ಇದ್ದಾರೆ. ಸಾರ್ವಜನಿಕರ ಹಿತದೃಷ್ಟಿಯಿಂದ ಈ ಖಾಸಗೀ ಸಂಸ್ಥೆಗಳನ್ನು ಸರ್ಕಾರದವರು ಅವರ ಹಿತಕ್ಕೆ ಅನ್ವಯವಾಗುವಂತೆ ತಮ್ಮ ಹಿಡಿತದಲ್ಲಿ ಇಟ್ಟುಕೊಳ್ಳುವುದಕ್ಕೆ ಆಗುವುದಿಲ್ಲ. ಆದಕಾರಣ ಖಾಸಗೀಯವರಿಗಾಗಲೀ, ಸಂಸ್ಥೆಗಳಿಗಾಗಲೀ ವಹಿಸಿಕೊಡುವುದು ಸೂಕ್ತವಲ್ಲ. ಮೈಸೂರು ಸರ್ಕಾರದವರೇ ಎಲ್ಲಾ ಕೈಗಾರಿಕೆಗಳನ್ನು ನಡೆಸಿಕೊಂಡು ಬರಬೇಕೆಂದು ನನ್ನ ಅಭಿಪ್ರಾಯವಲ್ಲ. ಆದರೆ ಈಗಿರತಕ್ಕ ಕೈಗಾರಿಕೆಗಳನ್ನು ಬೇರೆಯವರಿಗೆ ವಹಿಸಿಕೊಡಬೇಕಾದ ಅವಶ್ಯಕತೆ ಇಲ್ಲವೆಂದು ನನ್ನ ಅಭಿಪ್ರಾಯ.

The Hon'ble Sri H. C. DASAPPA.—Mr. Speaker, Sir, I am very glad that my Hon'ble friend Sri A. Bheemappa Naik has brought this motion before the House. It has helped the House to ascertain the views of the Hon'ble Members on this very vital, important, and topical question not only in Mysore but in the whole of India. This question of nationalisation has been agitating the minds of the people especially after we won freedom. Certain elements of socialistic persuasion have been talking about nationalisation and whether they are so talking with a full knowledge of all the implications or not, is more than I can say. But I may say that this is not such an easy matter as some friends may take it. My Hon'ble friend Sri M. N. Jois who I still maintain has not interpreted the object of the mover of this cut motion correctly, said that the Government had no definite policy so far as this question is concerned, that in regard to land and so on they were talking of socialistic principles while in this case they were doing something which was not consistent with those principles. I ask one question; whether this nationalisation of industries can be dealt within in such a light-hearted manner? I can very well understand if my friends here, those who think of nationalisation, put forward a proposition that we must nationalise all industries in the State. Do those people whoever make a statement like that or advance an argument like that know what the implications are? Are we in a position to-day in Mysore to nationalise all industries—those which we are running ourselves as well as.........

Sri S. RANGA RAO.—That question was not discussed. The only question was whether to transfer some of the existing industries to the Joint Stock Companies or not.

The Hon'ble Sri H. C. DASAPPA.—I am answering the Hon'ble Member Sri Jois. He said that there was some inconsistency in the attitude of the Government towards this question. I suppose my friend must have been away when I was answering that point and not the other members. I am glad that the Hon'ble Member Sri Jois was practically alone in that view and that the other Hon'ble Members took a different view. I am answering not only the Hon'ble Members here but I suppose the body of opinion which is prevailing in the State as well as in India to-day. It is not a joke to talk of nationalisation in such a manner because that would mean that we should take up the question of nationalising all industries in the country. If we adopt that policy, certainly we shall have to think of the ways and means. But I think that to-day, and for a long time to come, it is an impossible proposition. (Hear, hear) If Socialistic Government were to assume power and if they could try to get the wherewithal and convert all the private enterprises into national ones,—not that I would regret or anything like that—that day is possibly very far off from us. Therefore let us not confuse the issues by talking ......

Sri M. N. JOIS.—If Government have decided so far as the question of private enterprise is concerned, it means they have given a go-by to the Government enterprises because, if there is nationalisation there is no Government enterprise; if there is no Government enterprise everything will go to the individuals.

The Hon'ble Sri H. C. DASAPPA.—I will answer. There is an utter confusion prevailing in the minds of some Hon'ble Members. When I say that nationalisation of industries as such is an impossible proposition to-day it does

(THE HON'BLE SRI H. C. DASAPPA.)
not mean that Government should not run certain national industries.

Sri T. SUBRAMANYA.—In fact, the former portion was not correct. With all due deference to the Hon'ble Minister for Finance, I may say that we were not considering the question of desirability or undesirability of nationalising every industry. We were considering the question of transferring industries managed by Government to private enterprise.

The Hon'ble Sri H. C. DASAPPA.—Perfectly correct. I agree cent per cent with the Hon'ble Sri T. Subramanya. Because my Hon'ble friend Sri M. N. Jois introduced a foreign element into the discusions, lest it should create some misunderstanding in the minds of the public as to the attitude of the Government, I am saying that the question of nationalisation is a very wide one and it should not be tinkered with. Let us not employ the word 'nationalisation' at all.

Sri T. SUBRAMANYA.—I am not here holding any brief for the Hon'ble Member Sri M. N. Jois. He can take care of himself. In fact we want the Hon'ble Minister to confine himself as to the steps the Government are going to take with regard to industries now managed by them.

The Hon'ble Sri H. C. DASAPPA.—I am answering that.

Sri T. SUBRAMANYA.—I will put one more question. The Hon'ble Minister is anxious to start some more industries on behalf of Government. Is he likely to give up some industries to the management of private individuals or is he thinking of continuing to manage them and also taking up more industries?

The Hon'ble Sri H. C. DASAPPA.—All that I will answer. If my friends have a little patience, I will cover all the points practically raised by them. This is a most valuable contribution that is being made to the discussion before this House and as I said already I am thankful to the Hon'ble Member for having brought forward this cut motion. Therefore let us not confuse this term 'nationalisation' with the advisability of the Mysore Government continuing some of the industries which are now in their hands or transferring them to Joint-Stock Companies. Let us decide, as the Hon'ble Member Sri T. Subramanya was saying, whether it is desirable to transfer any of the State-owned industries to private hands and confine ourselves to that point. I am prepared to answer that.

Sir, during the question hour, as Sri Mascarnhes I think, said I made it very clear that the policy has all along been, in Mysore at any rate, fairly clear to this effect that all the basic and key industries should remain with Government. There is no doubt about it.

Sri T. SUBRAMANYA.—Is paper industry a basic industry?

Sri A. BHEEMAPPA NAIK.—Sir, it is not question hour. My friend is going on interrupting and interfering.

Sri M. N. JOIS.—On a point of order Sir. If any member interrupts, is it Hon'ble Sri Bheemappa Naik that should stop him from doing so or the Hon'ble Speaker, Sir?

Sri A. BHEEMAPPA NAIK.—It is everybody's business to inform the Hon'ble Speaker.

The Hon'ble Sri H. C. DASAPPA.—I must make it clear that the Paper Mills is not a State owned industry; it is a Joint Stock Company. Anyway, it is not so relevant to the point.

Sri T. SUBRAMANYA.—I realise that.

The Hon'ble Sri H. C. DASAPPA.—Let me again repeat that basic industries like Electric, Iron and Steel Works, Railways which have now gone over to the Centre.........

(Interruption).

The Hon'ble Sri H. C. DASAPPA.—These industries must be state-owned and they must be run by the State. I may incidentally say, because Transport is so intimately connected with Transport in general, that is Railway Transport, that the idea is, in course of time we may nationalize Road Transport. I do not want to speak further because there is a reference that question and the question will come up again under the Road Transport Grant. As regards the other

industries, the idea of Mysore Government is to start medium size industries, develop them see that they get settled and in course of time pass them on to private people. That has been the pattern all along. In pursuance of that policy, what we have done is, we have sponsored a number of industries like paper, lace and paint, the Industrial and Testing Laboratory and sugar and of course soap, porcelain and so on. You will see that while some of these things like porcelain, electric, silk and soap have been fully State owned, a large number have been sponsored by Government where the Government take part of the capital and the rest of the capital is thrown open to the public. That has been done because private enterprise was not coming forth to a sufficient extent and it has enabled us not only to build up these particular industries but also to set an example for others and enable them to start similar industries. These industries we start, apart from the basic and key industries, because private capital is shy. In respect of these industries there is a vast field for private enterprise which the Mysore Government have actively fostered by way of granting various concessions like electricity, water supply, etc. Kirloskar and various others have started industries and I do not want to say more in the matter. So that has been a fine pattern set up by Mysore.

As regards the basic and key industries, one and all agree—and there is no difference of opinion—that they must be continued to be State owned. I see some difference of opinion with regard to these State sponsored industries other than basic and key industries. What are we to do with it? Let me just deal with the history of some of these things like Lac and Paint, the Industrial and Testing Laboratory and so on. Some of them were started by the Government as fully State owned and subsequently they were transferred to private agency.

Sir, we are more or less in the horns of a dilemma. There are concerns some of which are giving us good return and some of which are not working well. If it is a concern which is not giving much profit, why not pass it on to private-enterprise? And do not do so if it is a concern paying us good return. Sir, these are arguable points. Let us take first some of these concerns which are not fairing well. It has always been the attempt of Mysore Government to help these industries to stand on their legs and see that they prosper because they have a notion that this is a Welfare State. I want to point out the Krishnarajendra Mills. It was started and it fell on its back. What did Mysore Government do? Mysore Government went to its help, rehabilitated it and passed it on. Is it not a good policy? Likewise, take the Tobbaco Company, the Mysore Chrome and Tanning Company. The share of the Tobbaco Company was Rs. 3-8-0 or Rs. 3-15-0 and now it has shot up to Rs. 8, just because Government went to its help. Now it is well on its rails and there is no difficulty. With regard to every industry the wisdom would be, to try to rehabilitate them and pass than on to private companies and allow them to manage themselves.

With regard to the other industries which are paying up well, there is no difference of opinion. This is just the way in which I also discussed with Kasturbhai Lalbhai when he had come here.

Sri S. RANGA RAO.—He is a greatest capitalist, is it not?

The Hon'ble Sri H. C. DASAPPA.—Do you think that a man is not patriotic merely because he is a capitalist?

Sri S. RANGA RAO.—Not that. You consult only capitalists.

The Hon'ble Sri H. C. DASAPPA.—I do not admit it. The fact that he has made industries a success is a thing which we cannot forget. That is a matter which we should welcome.

Now, Sir, I was on this point, namely, about these industries which are running well. When I said this, all that he said was, "you can get not only the book value or the market value of the concern but you can certainly get a good return on the goodwill." So, when the shares shoot up, as Sri Ranga

(THE HON'BLE SRI H. C. DASAPPA)

Rao says, you can take advantage of the shares shooting up, get money and invest it in concerns to be newly started.

(There was some interruption by Sri S. Ranga Rao) I do not want my friend to interrupt me too much though occasionally I do not mind. So get money from some of these concerns and utilise it for starting new industries. If, for instance, public enterprise was forthcoming in plenty, we need not have bothered very much about it. But, unfortunately, to-day capital is shy. We are giving so many advantages and facilities and yet private capital is not coming forward. I am not referring to the position in Mysore only, I am referring to the whole of India. Therefore, just as during the days past, when capital was shy, when people were not sufficiently enterprising during the time of Sir M. Visveswaraya, Government came forward to start these industries, even to-day we follow the same policy. Then there might have been a little money, but to-day there is no money. The question is, whether it is not a wise policy to get money released from some of these concerns and start new concerns vital for national economy in the country. I do not think I could say very much on this. All that I can say is, all these matters are very important and Government are not anxious to take a hasty step. In fact I have got a copy here of the expression of the Hon'ble Chief Minister at the Chamber of Commerce and it is very cautiously worded.

"They were even considering actively the possibility of handing over certain State concerns to private enterprise if conditions proved satisfactory."

Under that clause you see that a lot of things can be thought of. "When conditions prove satisfactory" means, you must get adequate return and the persons to whom you transfer the properties must be reliable persons and there must be also efficient management assured and so on.

My Hon'ble friend Sri G. A. Acharya referred to income-tax and said that these State owned industries to-day do not have to pay income-tax. The moment they are transferred to joint stock companies, they must begin to pay income-tax. These are all matters which the Government have got to consider. The Government have as yet taken no steps to implement this idea.

Voices: Thank you, Sir.

The Hon'ble Sri H. C. DASAPPA.—Because this is matter which is yet to be considered we have not thought of any particular industry so far. All these things have got to be considered in due course. I have already stated last time that before we do anything like that, the matter will be referred to the Industries Advisory Committee and their views will be ascertained.

Sri H. SIDDAVEERAPPA.—Can you place before the House the report of the Kasturbhai Lalbhai's Committee on State industries?

The Hon'ble Sri H. C. DASAPPA.—Even that I answered last time. I said that it is marked "Secret" and given to us by the States Ministry. In the face of that red and significant label, how can I give it? Although everything contained therein is not of such a confidential nature, I have got to take the permission of the States Ministry before I can pass it on to the Hon'ble Member.

Sri G. A. ACHARYA.—Is it not in the interests of this House to know what it contains?

The Hon'ble Sri H. C. DASAPPA.—I tell the Hon'ble Member that I have taken steps to place it before the House long before it was suggested to me.

Sri H. SIDDAVEERAPPA.—Has it been sent by the States' Ministry?

The Hon'ble Sri H. C. DASAPPA.—Yes and as soon as I get the permission of the States Ministry to publish it, it will be handed over to the Hon'ble Member.

So, Sir, after all there is nothing very frightening in this matter. There is nothing to be scared away. If there is any suggestion that the industries are going to be handed over to any one individual or set of individuals, that idea is wholely erroneous. Let not people be under any such misapprehension. If

and when things are decided, it will be made known to everybody and everything will be done in a perfectly normal manner.

I am therefore thankful to Sri A. Bheemappa Naik for having brought this motion before the House because it has helped to clarify certain doubts. With these absolute and certain assurances, I hope he will kindly withdraw the cut motion.

Sri A. BHEEMAPPA NAIK.—I withdraw the cut motion with the permission of the House.

The cut motion was, by leave of the House withdrawn.

Sri G. A. ACHARYA.—Sir, when I referred to some statement of the Finance Minister in the course of my speech, the Hon'ble Finance Minister was pleased to deny it. If you will permit me, I will read it.

The Hon'ble Sri H. C. DASAPPA.—I did not say that I will increase production to 7,000 tons. But I said that we have got a scheme to increase production. Please read it.

Sri G. A. ACHARYA.—This relates to the accounts of the year 1946-47 :—

"...The Chairman stated that the present output of the Soap Factory was about 600 tons for the whole year. He said plans were afoot to manufacture 5,000 tons of toilet and 2,000 tons washing soap per year."

The Hon'ble Sri H. C. DASAPPA.—I said plans were drawn up.

Sri G. A. ACHARYA.—Government planning was very slow.

Mr. SPEAKER.—Cut motion No. 39. in the supplementary List.

Policy pursued by the Government in respect of Post-war Development Schemes and cottage and rural industries.

ಶ್ರೀ ಎಂ. ಮಾದಯ್ಯನವರು (ಮೈಸೂರು ಜಿಲ್ಲೆ—ನಿಮ್ನ ಪಂಗಡ).—ಅಧ್ಯಕ್ಷರೇ ನನ್ನ ಖೋತಾ ಸೂಚನೆಯು ಈ ರೀತಿಯಿದೆ :—

"That the demand under the head '43' Industries and Supplies (except Sericulture) for Rs 35,73,600 be reduced by Re. 1 (to raise a discussion about the policy pursued by the Government in respect of Postwar Development scheme under Industries in general and in respect of cottage and rural industries in particular"

ಸ್ವಾಮಿ, ಸರ್ಕಾರದವರು ಯುದ್ಧಾನಂತರ ಪುನರ್ಯೋಜನೆಗಳಿಗೆಂದು 17,27,000 ರೂಪಾಯಿಗಳನ್ನು ಈ ಸಾರಿ ಕೊಟ್ಟಿದ್ದಾರೆ. ಈ ವರ್ಷದ ಬಡ್ಜೆಟ್ಟಿಗಿಂತ ಮುಂದಿನ ವರ್ಷದ ಬಡ್ಜೆಟ್ಟಿಗೆ ಸ್ವಲ್ಪ ಜಾಸ್ತಿ ಮಾಡಿದ್ದೀರಿ. ಅದೂ ಸಾಲದೆಂದು ನಾನು ಹೇಳುತ್ತೇನೆ. ಏಕೆಂದರೆ ಇದರಿಂದ ನೀವು ಡಿಸ್ಟ್ರಿಕ್ಟ್ ಮತ್ತು ತಾಲ್ಲೂಕ್ ಹೆಡ್‌ಕ್ವಾರ್ಟರುಗಳಲ್ಲಿ ಕೈಗಾರಿಕಾ ಸ್ಕೂಲುಗಳನ್ನು ಸ್ಥಾಪನೆ ಮಾಡುವುದಕ್ಕಾಗಿ ಕೊಟ್ಟಿರುವ ಹಣ ಏನೇನೂ ಸಾಲದು. ಸಂಸ್ಥಾನಾಮುಳೆ ಅನೇಕ ಕೈಗಾರಿಕಾ ಸ್ಕೂಲುಗಳನ್ನು ಏರ್ಪಡಿಸಿ ಈ ಕೈಗಾರಿಕೆಗಳಿಗೆ ಹೆಚ್ಚು ಪ್ರೋತ್ಸಾಹ ಕೊಡಬೇಕೆಂದು ಹೇಳಿ ನಾನು ಒತ್ತಾಯಪೂರ್ವಕವಾಗಿ ಹೇಳುತ್ತೇನೆ. ಇಲ್ಲಿ ಕೊಟ್ಟಿರುವ ಅಂಕಿಅಂಶಗಳ ಪ್ರಕಾರ, ಡೈರೆಕ್ಟರವರ ಅಧೀನದಲ್ಲಿ 46,000 ರೂಪಾಯಿಗಳನ್ನು ಇಟ್ಟಿದ್ದೀರಿ. ಇದು ತೀರಾ ಸಾಲದು. ಸಿಬ್ಬಂದಿಗೆ ಕೊಟ್ಟು, ಆಮೇಲೆ ಕೈಗಾರಿಕೆಗಳಿಗಾಗಿ (ಅಂದರೆ ಯುದ್ಧಾನಂತರ ಯೋಜನೆಗಳು ಮತ್ತು ಗ್ರಾಮಕೈಗಾರಿಕೆಗಳನ್ನು ನೋಡಿಕೊಳ್ಳುವುದಕ್ಕಾಗಿ ಒಬ್ಬ ಪ್ರತ್ಯೇಕ ಅಧಿಕಾರಿಯನ್ನು ನೇಮಿಸುವುದಾದರೆ—ಏಕೆಂದರೆ ಇದು ಬಹಳ ಅಗತ್ಯ) ಅದಕ್ಕೂ ಇದರಲ್ಲೇ ಹಣ ಕೊಡಬೇಕು. ಸರ್ ಎಂ. ವಿಶ್ವೇಶ್ವರಯ್ಯನವರ ಸ್ಕೀಮನ್ನು ಈ ಸಾರಿ ಕೋಲಾರ ಮತ್ತು ಬೆಂಗಳೂರು ಡಿಸ್ಟ್ರಿಕ್ಟುಗಳಲ್ಲಿ ಜಾರಿಗೆ ತಂದಿದ್ದೀರಿ. ಇದನ್ನು ಇವೆರಡು ಡಿಸ್ಟ್ರಿಕ್ಟ್‌ಗಳಲ್ಲೇ ಅಲ್ಲದೆ ಸಂಸ್ಥಾನಾಮುಳೆ ಎಲ್ಲಾ ಕಡೆಗಳಿಗೂ ಅನ್ವಯಿಸುವಂತೆ ಮಾಡುತ್ತೇವೆಂದು ಹೇಳಿದ್ದಾರೆ. ಈ ಪ್ರಕಾರ ಸಂಸ್ಥಾನದ ಎಲ್ಲಾ ತಾಲ್ಲೂಕುಗಳಲ್ಲೂ ಏರ್ಪಡಿಸಬೇಕಾದರೆ ಒಬ್ಬ ಪ್ರತ್ಯೇಕ ಅಧಿಕಾರಿಯಿರಬೇಕಲ್ಲದೆ ಹೆಚ್ಚಿಗೆ ಸಿಬ್ಬಂದಿಯೂ ಅವಶ್ಯಕವೆಂಬದನ್ನು ಹೇಳಬೇಕಾಗಿಲ್ಲ.

ಆಮೇಲೆ ಗ್ರಾಮ ಕೈಗಾರಿಕೆಗಳ ವಿಚಾರದಲ್ಲಿ ಕೈಮಗ್ಗದವರ ವಿಷಯ ನೋಡುವುದಾದರೆ ಅವರಿಗೆ ನೀವು ಕೊಟ್ಟಿರುವ ಸಹಾಯ ಏನೇನೂ ಸಾಲದು. ಗ್ರಾಮಕೈಗಾರಿಕೆಗಳ ಪೈಕಿ ಇದರಷ್ಟು ಅವಶ್ಯವಾದ ಕೈಗಾರಿಕೆ ಬೇರೆ ಯಾವುದೂ ಇಲ್ಲವೆಂದರೂ ತಪ್ಪಲ್ಲ. ಅಂಥಾದ್ದರಲ್ಲಿ ಈ ಕೈಗಾರಿಕೆಗಳವರಿಗೆ ಸಾಕಾದಷ್ಟು ಕಚ್ಚಾ ಮಾಲುಗಳು ದೊರೆಯದೆ ದೇಶದಲ್ಲಿ ಯಾವುದು ಅತ್ಯಗತ್ಯವಾಗಿದೆಯೋ ಅಂಥಾದ್ದಕ್ಕೆ ಪ್ರೋತ್ಸಾಹವಿಲ್ಲವಾಗಿದೆ. ನಮ್ಮ ದೇಶದಲ್ಲಿ ಬಟ್ಟೆ ಅಭಾವವಿರುವುದು ಎಲ್ಲರಿಗೂ ಗೊತ್ತಿರುವ ವಿಚಾರ. ಈ ಪರಿಸ್ಥಿತಿಯಲ್ಲಿ ನಮ್ಮ ಕೈಮಗ್ಗದವರಿಗೆ ಹೆಚ್ಚು ಹೆಚ್ಚು ಉತ್ತೇಜನ ಕೊಡಬೇಕಾದ್ದು ಅತ್ಯಾವಶ್ಯಕವು. ಹೀಗಿರುವಾಗ ಕಚ್ಚಾ ಮಾಲುಗಳನ್ನು ಕೊಂಡುಕೊಳ್ಳುವುದಕ್ಕೆ 50,000 ರೂಪಾಯಿಗಳನ್ನು ಮಾತ್ರ ಕೊಟ್ಟಿದ್ದೀರಿ. ಕಳೆದ ಸಾರಿ ಮೂರು ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೀರಿ. ಹೀಗೆ ಕಡಿಮೆ ಮಾಡಿರುವುದರ ಉದ್ದೇಶವೇನೋ ಗೊತ್ತಿಲ್ಲ. ಹೇಗಾದರೂ ಮಾಡಿ ಕೈಮಗ್ಗದವರಿಗೆ ನೂಲನ್ನು ಕೊಂಡುಕೊಡುವುದಕ್ಕೆ ಯಥೇಚ್ಛವಾಗಿ ಏರ್ಪಾಡು ಮಾಡಿ ದೇಶಾದ್ಯಂತವೂ ಹಂಚಿಗೆ ಮಾಡಲು ತಕ್ಕ ಸಿಬ್ಬಂದಿಯನ್ನೇರ್ಪಡಿಸಿ ಹೆಚ್ಚಿಗೆ ಸೌಲಭ್ಯಗಳನ್ನು ಒದಗಿಸಿಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಸಂಸ್ಥಾನಾಮುಳೆ ಸುಮಾರು ಆರು ಲಕ್ಷಕ್ಕೆ ಮೇಲ್ಪಟ್ಟು ಕೈಮಗ್ಗದವರ ಸಂಸಾರಗಳಿಂದ ಕೂಡಿದ ಜನಸಂಖ್ಯೆ ಇದೆ.

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ನಮ್ಮ ದೇಶದಲ್ಲಿರುವುದು ಸುಮಾರು 3,000 ಕೈಮಗ್ಗಗಳಿವೆ ಅಷ್ಟೆ. ಅವರ ಮನೆಯವರನ್ನೆಲ್ಲಾ ಲೆಕ್ಕ ಹಾಕಿಕೊಂಡರೆ ನೀವು ಹೇಳಿದಷ್ಟು ಆಗುತ್ತದೋ ಏನೋ.

ಶ್ರೀ ಎಂ. ಮಾದಯ್ಯನವರು.—ಇರಬಹುದು. But we are given to understand that there are about six lakhs of weavers in the State, subject to correction.

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಒಂದೊಂದು ಮಗ್ಗಕ್ಕೂ 10—15 ಜನ ಇದ್ದರೆ ಆಗಬಹುದೋ ಏನೋ.

ಶ್ರೀ ಎಂ. ಮಾದಯ್ಯನವರು.—ಒಟ್ಟಿನಲ್ಲಿ ಈ ಕೈಗಾರಿಕೆಗಳಿಗೆ ಹೆಚ್ಚಿಗೆ ಪ್ರೋತ್ಸಾಹ ಕೊಡಬೇಕೆಂದು ಹೇಳಿ ನಾನು ಒತ್ತಾಯಪೂರ್ವಕವಾಗಿ ಹೇಳುತ್ತೇನೆ.

ಹೀಗೆ ತಾವು ಈ ನೇಯ್ಗೆಯವರ ವಿಚಾರದಲ್ಲಿ, ಒಂದು ಸರ್ಕಾರಿ ಸೊಸೈಟಿಯನ್ನು ಏರ್ಪಾಡು ಮಾಡಿ, ತನ್ಮೂಲಕ ಇವರಿಗೆ ನೂಲು ಸರಬರಾಯಿ ಮಾಡಿದರೆ ತುಂಬಾ ಅನುಕೂಲವಾಗುತ್ತದೆ. ನಾನು ಇದನ್ನು ಏತಕ್ಕಾಗಿ ಹೇಳುತ್ತಿದ್ದೇನೆಂದರೆ ಈ ದಿವಸ ಈ ಮಧ್ಯಸ್ಥರ ಅಂದರೆ ವರ್ತಕತನದವರ ಹಿಡಿತಕ್ಕೆ ಎಲ್ಲರೂ ಸಿಕ್ಕಿಹೋಗಿ ಅವರ ಜೀವನದ ಸಮಸ್ಯೆಗಳು ಬಹಳ ದುಸ್ತರಕ್ಕೆ ಬಂದಿವೆ. ಹೀಗೆ ಈ ಮಧ್ಯಸ್ಥರ ಆಡಳಿತದಲ್ಲಿ ನೇಯ್ಗೆಯವರಿಗೆ ಸರಿಯಾಗಿ ನೂಲು ದೊರೆಯದೆ ತುಂಬಾ ಅನಾನುಕೂಲಗಳಾಗಿರುತ್ತವೆ. ಕೆಲವು ಸಂದರ್ಭಗಳಲ್ಲಿ ಹೀಗೆ ಈ ವರ್ತಕರು ಕೈಗಾರಿಕೆಯವರಿಗೆ ಕೊಡತಕ್ಕ ನೂಲನ್ನು ಸರಿಯಾಗಿ ಕೊಡದೆ ಬೇರೆ ಕಡೆ ರವಾನೆ ಮಾಡುತ್ತಿದ್ದುದನ್ನು ಕಂಡು ಹಿಡಿದು, ಸರ್ಕಾರದವರನ್ನು ಒತ್ತಾಯಪಡಿಸಿ, ಅವರು ಈ ಹಂಚಿಕೆ ವಿಚಾರದಲ್ಲಿ ಕೈಹಾಕಬಾರದೆಂದು ಸ್ಟೇ ಆರ್ಡರ್ ಸಹ ಮಾಡಿಸಿದ್ದಾರೆ. ತಾವು ಈ ವಿಚಾರದಲ್ಲಿ ಜಾಗ್ರತೆಯಾಗಿ ಕಾರ್ಯಕ್ರಮಗಳನ್ನು ಕೈಗೊಳ್ಳದಿದ್ದರೆ ದೇಶದಲ್ಲಿ ಅಲ್ಲೋಲ ಕಲ್ಲೋಲವಾಗುತ್ತದೆ. ಈ ಬಗ್ಗೆ ಮದರಾಸು ಪ್ರಾಂತ್ಯದಲ್ಲಿ ಕೆಲವು ಕಡೆ ಈ ನೇಯ್ಗೆಯವರಿಗೆ ಸರಿಯಾಗಿ ನೂಲನ್ನು ಕೊಡದೆ ಹೋದ್ದರಿಂದ ಅವರ ಜೀವನೋಪಾಯಕ್ಕೆ ಕಲ್ಲುಬಿದ್ದು, ಕೆಲವು ಜನರೂ ಸಹ ಸತ್ತುಹೋಗಿದ್ದಾರೆಂದು ವರದಿಯಾಗಿದೆ. ಈ ವಿಚಾರ ಸರ್ಕಾರದವರ ಗಮನಕ್ಕೂ ಬಂದಿರಬಹುದು. ಹೀಗೆ ಇತರ ಯಾವ ವಿಧವಾದ ಆಸ್ತಿಪಾಸ್ತಿಗಳೂ ಇಲ್ಲದೆ, ಈ ಒಂದು ಕೈಮಗ್ಗದಿಂದಲೇ ಜೀವನೋಪಾಯವನ್ನು ಕಲ್ಪಿಸಿಕೊಂಡಿರುವಂಥ ಜನರೂ ವಿಶೇಷವಾಗಿದ್ದಾರೆ. ಹೀಗೆ ಸಹಸ್ರಾರು ಕುಟುಂಬಗಳ ಜೀವನಾಧಾರ ಇವರ ಮೇಲೆ ನಿಂತಿದೆ. ಹೀಗೆ ಅನೇಕ ಸಂಸಾರಗಳ ಜೀವನಕ್ಕೆ ಆಧಾರಭೂತರಾಗಿರತಕ್ಕ ಈ ಮಧ್ಯಸ್ಥಿಕೆಗಾರರಾದ ವರ್ತಕರ ಅನ್ಯಾಯದಿಂದ, ಅವರಿಗೆ ಸರಿಯಾಗಿ ದೊರೆಯಬೇಕಾದ ನೂಲು ದೊರೆಯದೆ ಹೋಗಿ, ಹಾಗೆ ಹಂಚಿಕೆಯಾಗಬೇಕಾಗಿದ್ದ ನೂಲು ಬೇರೆ ಕಡೆಗೆ ಹೋಗುತ್ತಿದೆಯೆಂದು ನನಗೆ ತಿಳಿದು ಬಂದಿದೆ.

ಆದುದರಿಂದ ನಾನು ಹೇಳುವುದಾದರೂ ಇಷ್ಟೇ: ತಾವು ಅವರಿಗೆ ಕೊಡತಕ್ಕ ಕೋಟಾದ ಪ್ರಕಾರ, ಅವರ ನೂಲು ಅವರಿಗೆ ನೇರವಾಗಿ ತಲಪುವಂಥ ಒಂದು ಸೂಕ್ತವಾದ ಮಾರ್ಗವನ್ನು ತಾವೀಗ ಕಂಡುಹಿಡಿಯಬೇಕಾಗಿದೆ. ಆದಕಾರಣ ನಾನು ಸಲಹೆ ಮಾಡುವುದೇನೆಂದರೆ, ಈಗ ತಾವು ಇಟ್ಟಿರತಕ್ಕ ಮಧ್ಯಸ್ಥಿಕೆಗಾರರನ್ನೆಲ್ಲಾ ತೆಗೆದು ಹಾಕಿ, ಈ ವ್ಯವಹಾರ ಸೊಸೈಟಿಗಳ ಮೂಲಕ ನಡೆಯುವಂತೆ ಮಾಡಬೇಕು ಎಂದು.

ಒಬ್ಬ ಮಾನ್ಯ ಸದಸ್ಯರು.—ಹಾಗೆ ಸೊಸೈಟಿಗಳಿಲ್ಲದ ಕಡೆ ಹೇಗೆ ಮಾಡುವುದು ?

ಶ್ರೀ ಎಂ. ಮಾದಯ್ಯನವರು.—ಹಾಗೆ ಸೊಸೈಟಿಗಳಿಲ್ಲದಿದ್ದರೆ, ಏರ್ಪಾಡು ಮಾಡಬೇಕೆಂಬುದೇ ನನ್ನ ವಾದ. ಇನ್ನು ಈ ಇಂಡಸ್ಟ್ರಿಯಲ್ ಸ್ಕೂಲಿನಲ್ಲಿ ವ್ಯಾಸಂಗ ಮಾಡತಕ್ಕ ಹುಡುಗರಿಗೆ ಸಾಕಾದಷ್ಟು ಪ್ರೋತ್ಸಾಹ ದೊರೆಯುತ್ತಿಲ್ಲ. ಆ ಬಗ್ಗೆ ತಾವು ಒದಗಿಸಿರತಕ್ಕ ಹಣ ಏನೇನೂ ಸಾಲದು. ಆದ್ದರಿಂದ ಅದನ್ನು ಜಾಸ್ತಿ ಮಾಡಬೇಕೆಂದು ಹೇಳುತ್ತೇನೆ. ಈಗ ತಾವು ಬೆಂಗಳೂರಿನಲ್ಲಿರತಕ್ಕ ಆಕ್ಯುಪೇಷನಲ್ ಇನ್‌ಸ್ಟಿಟ್ಯೂಟ್ ಮತ್ತು ಕೈಗಾರಿಕಾ ಪಾಠಶಾಲೆಗಳಿಗೆ 1,008 ರೂಪಾಯಿಗಳನ್ನು ವಿದ್ಯಾರ್ಥಿವೇತನ ಇತ್ಯಾದಿ ಡೆವಲಪ್‌ಮೆಂಟ್ ಕಾರ್ಯಗಳಿಗೆಂದು ತೆಗೆದಿಟ್ಟಿದ್ದೀರಿ. ಇದು ಖಂಡಿತ ಸಾಲದು. ಅದೇ ರೀತಿ ಹಾಸನದಲ್ಲಿರತಕ್ಕ ಇಂಡಸ್ಟ್ರಿಯಲ್ ಪಾಠಶಾಲೆಗೂ ಕೂಡ 405 ರೂಪಾಯಿಗಳನ್ನು ಒದಗಿಸಿದ್ದೀರಿ. ಇದರಿಂದೇನೂ ಅಷ್ಟು ಪ್ರೋತ್ಸಾಹ ಹೆಚ್ಚಾಗಲು ಅವಕಾಶವಿಲ್ಲ. ಈ ಕ್ಷೇತ್ರಗಳಿಗೆ ಬಂದು, ಇಲ್ಲಿ ವ್ಯಾಸಂಗ ಮಾಡಿ, ನುರಿತು, ತಯಾರಾಗಿ, ಹೊರಗಡೆ ಹೋಗತಕ್ಕವರು, ಇದರ ಬಗ್ಗೆ ಗ್ರಾಮಾಂತರ ಪ್ರದೇಶಗಳಲ್ಲಿ ಸಂಚಾರ ಮಾಡಿ, ಜನರಿಗೆ ಸರಿಯಾದ ತಿಳಿವಳಿಕೆಯನ್ನು ಕೊಟ್ಟು, ಹಾಗೆ ಗ್ರಾಮಾಂತರ ಪ್ರದೇಶದಲ್ಲಿ ದೊರೆಯಬಹುದಾದಂಥಾ ವಸ್ತುಗಳನ್ನು ಸಂಗ್ರಹಿಸಿ, ಜನರ ಬೆಂಬಲದಿಂದ ಅಂಥಾ ಸಣ್ಣ ಪುಟ್ಟ ಕೈಗಾರಿಕೆಗಳನ್ನೇ ಒಂದು ಕಾರ್ಖಾನೆಯ ಮಾದರಿಯಲ್ಲಿ ಸ್ಥಾಪಿಸಿ ಹತ್ತಾರು ಜನರಿಗೆ ಜೀವನ ಕಲ್ಪಿಸಿಕೊಡುವಂಥಾ ಚೈತನ್ಯ ಬರುವಂತೆ ತಾವು ಈ ಸ್ಕೂಲುಗಳನ್ನು ಏರ್ಪಾಡು ಮಾಡಬೇಕು. ಈಗ ತಾವು ಒಂದೊಂದು ಜಿಲ್ಲೆಯಲ್ಲೂ ಒಂದೊಂದು ಇಂಡಸ್ಟ್ರಿಯಲ್ ಸ್ಕೂಲುಗಳನ್ನು ಇಟ್ಟಿದ್ದೀರಿ.

The Hon'ble Sri H. C. DASAPPA.—The Hon'ble Member may cut short his speech. There are other cut motions to be taken up.

ಶ್ರೀ ಎಂ. ಮಾದಯ್ಯನವರು.—ತಾವು ಈಗ ಫೋರ್ಸ್ವಾರ್ ಡೆವಲಪ್‌ಮೆಂಟ್ ಯೋಜನೆಯಲ್ಲಿ ಕೈಗೊಳ್ಳಬೇಕೆಂದಿರುವ ಗ್ರಾಮ ಕೈಗಾರಿಕೆಗಳಲ್ಲಿ ಜನರು ಹೆಚ್ಚು ಹೆಚ್ಚು ಪ್ರವೇಶಿಸುವಂತೆ ಪ್ರೋತ್ಸಾಹ ನೀಡಬೇಕು. ಆದರ ಈ ದಿವಸ ತಾವು ಅಂಥ ಯಾವ ಪ್ರೋತ್ಸಾಹಗಳನ್ನೂ ನೀಡುತ್ತಿಲ್ಲ. ಆದ್ದರಿಂದ ಜನಸಾಮಾನ್ಯರಿಗೆ ಇದರಲ್ಲಿ ಅಭಿರುಚಿ ಹೊರಟುಹೋಗಿದೆ. ಇದಕ್ಕಾಗಿ ತಾವು ಹೆಚ್ಚು ಹೆಚ್ಚು ಪ್ರೋತ್ಸಾಹ ನೀಡಬೇಕೆಂದು ನಾನು ಬಾರಿ ಬಾರಿಗೂ ಹೇಳುತ್ತಲೇ ಇದ್ದೇನೆ. ಇಷ್ಟು ಹೇಳಿ ಖೋತಾ ಸೂಚನೆಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

Mr. SPEAKER.—Cut motion moved.—

"That the demand be reduced by Re. 1."

ಶ್ರೀ ಎಸ್. ರಂಗರಾಮಯ್ಯನವರು (ಮೈಸೂರು ಜಿಲ್ಲೆ).—ಸ್ವಾಮಿ, ನಾನು ಈ ಖೋತಾ ನಿರ್ಣಯವನ್ನು ಅನುಮೋದಿಸುತ್ತೇನೆ. ಹಾಗೆ ಅನುಮೋದಿಸುವಾಗ ಕೆಲವು ಅಂಶಗಳನ್ನು ಈ ಮಾನ್ಯ ಸಭೆಯವರ ಗಮನಕ್ಕೆ ತರಬೇಕೆಂದಿದ್ದೇನೆ. ಈ ತಾಲ್ಲೂಕು ಅಭಿವೃದ್ಧಿ, ಜಿಲ್ಲಾಭಿವೃದ್ಧಿ ಸಮಿತಿಗಳು ಏರ್ಪಾಡಾದ ಮೇಲೆ, ಈ ಸಂಬಂಧವಾಗಿ ಏನೇನು ಕಾರ್ಯಾಚರಣೆಗಳನ್ನು ಕೈಗೊಂಡು ಈ ಗ್ರಾಮಕೈಗಾರಿಕೆ ಮತ್ತು ಗೃಹಕೈಗಾರಿಕೆಗಳನ್ನು ಅಭಿವೃದ್ಧಿ ಪಡಿಸುತ್ತೇವೆಂದು ಒಂದು ಆಶಾದಾಯಕವಾದ ಅಭಿಪ್ರಾಯವನ್ನು

ಕೊಟ್ಟಿದ್ದರೋ, ಅವುಗಳೆಲ್ಲವೂ ಕೇವಲ ಅವುಗಳ ಪ್ರಾರಂಭ ಕಾಲಕ್ಕೆ ಮುಕ್ತಾಯವಾಗಿ, ಆ ಗ್ರಾಮಾಭಿವೃದ್ಧಿ ಕೆಲಸಗಳು ಇದ್ದ ಹಾಗೆಯೇ ಇರುತ್ತವೆಂದು ಕೇಳಿದ್ದೇನೆ. ಈ ಸಂದರ್ಭದಲ್ಲಿ ನಾನು ಹೇಳಬೇಕಾಗಿರುವುದೇನೆಂದರೆ, ಈ ಗ್ರಾಮಾಭಿವೃದ್ಧಿ ಮತ್ತು ಗ್ರಾಮಕೈಗಾರಿಕೆಗಳನ್ನು ಅಭಿವೃದ್ಧಿಪಡಿಸಲು ಎರಡು ಮಾರ್ಗಗಳಿವೆ. ಯಾವ ಯಾವ ಗ್ರಾಮಗಳಲ್ಲಿ ಯಾವ್ಯಾವ ಗೃಹಕೈಗಾರಿಕೆಗಳು ಈಗಾಗಲೇ ನಡೆದುಕೊಂಡು ಬರುತ್ತಿವೆಯೋ ಅಂಥವುಗಳಿಗೆ ಬೇಕಾದ ಪ್ರೋತ್ಸಾಹ ಕೊಡತಕ್ಕದ್ದು, ಒಂದು ಮಾರ್ಗ. ಯಾವ ಯಾವ ಕಚ್ಚಾ ಮಾಲುಗಳು ಯಾವ ಯಾವ ಗ್ರಾಮ ಸರಹದ್ದುಗಳಲ್ಲಿ ವಿಶೇಷವಾಗಿ ದೊರೆಯುತ್ತಿವೆಯೋ ಅಂತಹ ಕಡೆಗಳಲ್ಲಿ ಹೊಸ ಕೈಗಾರಿಕೆಗಳನ್ನು ಸ್ಥಾಪಿಸತಕ್ಕದ್ದು ಎರಡನೆಯ ಮಾರ್ಗ. ಆದರೆ ಇಂತಹ ವಿಚಾರಗಳಲ್ಲಿ ಸರ್ಕಾರದವರು ಇಲ್ಲಿಯವರೆಗೂ ಯಾವ ಯಾವ ಸರಹದ್ದಿನಲ್ಲಿ ಏನೇನು ಕಚ್ಚಾ ಮಾಲುಗಳು ಹೇರಳವಾಗಿ ದೊರೆಯುತ್ತವೆಯೆಂಬುದನ್ನಾಗಲೀ ಅಥವಾ ಇಂತಿಂಥಾ ಗ್ರಾಮಕೈಗಾರಿಕೆಗಳಿಗೆ ಎಲ್ಲೆಲ್ಲಿ ಅನುಕೂಲವಿರುತ್ತದೆಂಬುದನ್ನಾಗಲೀ ಶೇಖರಿಸಿ ಆ ಬಗ್ಗೆ ಒಂದು ಪಟ್ಟಿಯನ್ನು ತಯಾರಿಸಿ ದೇಶದ ಜನತೆಯ ಮುಂದೆ ಇಟ್ಟಿರುವುದಿಲ್ಲ. ಇದರಿಂದ ಬಹಳ ತೊಂದರೆಯಾಗಿರುತ್ತದೆ. ಸಾಮಾನ್ಯವಾಗಿ ಈ ಗೃಹಕೈಗಾರಿಕೆ, ಗ್ರಾಮಕೈಗಾರಿಕೆಗಳು ಜನಸಾಮಾನ್ಯರ ನಿತ್ಯ ಜೀವನೋಪಾಯಕ್ಕೆ ಸಾಧಕವಾಗಿರತಕ್ಕವುಗಳಾಗಿವೆ. ಇಂಥವುಗಳ ವಿಚಾರದಲ್ಲಿ ಸಾಕಷ್ಟು ಪ್ರೋತ್ಸಾಹ ನೀಡತಕ್ಕದ್ದು. ಸರ್ಕಾರದವರ ಆದ್ಯ ಕರ್ತವ್ಯ. ಈಗ ಒಂದು ಕುಲುಮೆ ಕಸಬಿದೆ. ಆದರೆ ಅದನ್ನು ಮಾರ್ಪಾಡು ಮಾಡಬೇಕಾಗಿದ್ದರೆ ಜನರಿಗೆ ಸಾಕಷ್ಟು ಜ್ಞಾನಾರ್ಜನೆಯಾಗಿರಬೇಕು. ಹಾಗೆ ಆಗದೆ ಇರುವುದರಿಂದ ಏನು ಒಂದು ಹಿಂದಿನ ಕಾಲದಿಂದ ನಡೆದುಕೊಂಡು ಬಂದಿತ್ತೋ ಅದೇ ಹಳೇ ಪದ್ಧತಿಯ ಪ್ರಕಾರ ಈಗಲೂ ಆ ಕುಲುಮೆಗೆ ಇದ್ದಿಲನ್ನು ಹಾಕಿ, ಕೈಯಿಂದ ತಿದಿಗಳನ್ನು ಒತ್ತಿ ಒತ್ತಿ ಕೆಲಸ ಮಾಡಬೇಕಾಗಿದೆ. ಆದರೆ ಇತ್ತೀಚೆಗೆ ತಿದಿ ಒತ್ತುವ ಬದಲು ಈಗ ಒಂದು ಚಕ್ರ ತಿರುಗಿಸತಕ್ಕ ನೂತನ ವಿಧಾನವನ್ನು ಕಂಡು ಹಿಡಿದಿರುವ ಪ್ರಯುಕ್ತ ಆ ಬಗ್ಗೆ ಎಷ್ಟೋ ಸಹಾಯವಾಗಿದೆ. ಅದೇ ರೀತಿ ತೆಂಗಿನ ಮರಗಳು ಚಾಮರಾಜನಗರ ಮತ್ತು ಅರಸೀಕೆರೆ ತಾಲ್ಲೂಕುಗಳಲ್ಲಿ ವಿಶೇಷವಾಗಿವೆ. ಅಲ್ಲಿ ಈ ಹಗ್ಗ ಮತ್ತು ಹುರಿಗಳನ್ನು ಮಾಡತಕ್ಕ ಕೈಗಾರಿಕೆ ಸ್ಥಾಪಿಸಲು ಅನುಕೂಲವಾಗಿದೆ. ಹೀಗೆ ಎಲ್ಲೆಲ್ಲಿ ಏನೇನು ಅನುಕೂಲವಾಗುತ್ತದೋ ಅಲ್ಲೆಲ್ಲಾ ನಮ್ಮ ಹಳೇ ಸಂಪ್ರದಾಯಗಳನ್ನು ಬಿಟ್ಟುಬಿಟ್ಟು, ಅವು ಈಗ ಪ್ರಯೋಜನವಿಲ್ಲದಂತಾಗಿವೆ. ಹೊಸ ರೀತಿಯಲ್ಲಿ ನಡೆಸಲು ಅನುಕೂಲವಾಗುವಂಥ ಒಂದು ಕೈಗಾರಿಕಾ ಯೋಜನೆಯ ಪಟ್ಟಿಯನ್ನು ಕೈಗಾರಿಕಾ ಇಲಾಖೆಯವರು ಏನಾದರೂ ತಯಾರಿಸಿಟ್ಟಿದ್ದಾರೆಯೇ ? ಹಾಗೆ ಯಾವುದನ್ನೂ ಮಾಡದೆ ತಿಂಗಳಾದ ತಕ್ಷಣ ಅವರ ಸಂಬಳ ತೆಗೆದುಕೊಂಡು ಅವರ ಅನುಕೂಲ ನೋಡಿಕೊಳ್ಳುತ್ತಿದ್ದಾರೆಯೇ ಹೊರತು ಇಂಥಾ ರಿಪೋರ್ಟುಗಳನ್ನೇನೂ ತಯಾರು ಮಾಡುತ್ತಿಲ್ಲ. ಹಾಗೂ ಒಂದು ವೇಳೆ ಆ ಇಲಾಖಾ ಅಧಿಕಾರಿಗಳನ್ನು ಕೇಳಿದರೆ, ನಾನು ಇರತಕ್ಕವನು ಒಬ್ಬ, ಎಲ್ಲೆಲ್ಲಿ ಅಲೆಯೋಣ ಎಂಬುದಾಗಿ ಅವರು ಹೇಳುತ್ತಾರೆ.

ಹುರಿ ಮಾಡುವುದು, ಹಗ್ಗ ಮಾಡುವುದು ಮುಂತಾದ ಕೈಗಾರಿಕೆಗಳಿಂದ ಸಾವಿರಾರು ಜನರಿಗೆ ಜೀವನವಾಗುತ್ತದೆ. ಚಂದಕವಾಡಿ ಗ್ರಾಮದಲ್ಲಿ ಮಲ್ಟಿ ಪರ್ಪಸ್ ಕೋ-ಆಪರೇಟಿವ್ ಸೊಸೈಟಿಯಿದೆ. ಅಲ್ಲಿ ಕೊಡಲಿ, ಗುದ್ದಲಿ ಮೊದಲಾದ ಸಾಮಾನುಗಳನ್ನು ತಯಾರು ಮಾಡುತ್ತಾರೆ. ಅಲ್ಲಿನ ಸಾಮಾನುಗಳು ಬಹು ಪ್ರಸಿದ್ಧಿಯಾಗಿವೆ. ಯಾವ ಕಬ್ಬಿಣದ ಸಾಮಾನೂ ಕೂಡ ಅಲ್ಲಿ ತಯಾರಾಗಿರುವ ಸಾಮಾನುಗಳಷ್ಟು ಚೆನ್ನಾಗಿರುವುದಿಲ್ಲ. ಹಾಸನದ ಇಂಪ್ಲಿಮೆಂಟ್ಸ್ ಫ್ಯಾಕ್ಟರಿಯಲ್ಲೂ ಸಹ ಅಷ್ಟು ಉತ್ತಮವಾದ ರೀತಿಯಲ್ಲಿ ತಯಾರಿಸಲಾಗದು. ಅಂಥ ತಯಾರಿಕೆಗೆ ಆ ಸೊಸೈಟಿಯವರು ಕಬ್ಬಿಣ ಕೊಡಬೇಕೆಂದು ಕೇಳಿದರೆ ಕಬ್ಬಿಣದ ಅಭಾವದಿಂದ ಸಿಕ್ಕಲಿಲ್ಲ. ಅವರು ಮಾರಾಟಕ್ಕೆ ಸಾಮಾನುಗಳನ್ನು ಒದಗಿಸುವುದಕ್ಕೆ ಸಿದ್ಧವಾಗಿದ್ದರು. ಅಲ್ಲಿನ ಸಾಮಾನುಗಳು hot cakes ಎಂದು ಹೇಳುವ ಹಾಗೆ ಮಾರಾಟಕ್ಕೆ ಬಹಳ ಪ್ರಸಿದ್ಧಿಯಾದುವು. ಅದನ್ನು ಅಭಿವೃದ್ಧಿಪಡಿಸಬೇಕು. ಅದು ಕೃಶವಾಗಿದೆ. ಅಂಥಾದ್ದನ್ನು ಬಿಟ್ಟು ಬೇರೆ ಬೇರೆ ಯಾವುದನ್ನೋ ಮಾಡಿ ಎಂದು ಹೇಳುವುದರಿಂದ ಪ್ರಯೋಜನವಿಲ್ಲ. ಅದರಂತೆ ತಕ್ಷಣ ಒಂದು ಯೋಜನೆ ಮಾಡಿ ಯಾವ್ಯಾವ ಸ್ಥಳದಲ್ಲಿ ಏನಾಗುತ್ತಿದೆ ಎಂಬುದನ್ನು ನೋಡಿ ನಿರ್ದಿಷ್ಟ ಕಾರ್ಯಕ್ರಮ ಹಾಕಿ ಪ್ರೋತ್ಸಾಹ ಕೊಡಬೇಕು. ಈ ರೀತಿ ಸರ್ಕಾರದವರು ಪ್ರೋತ್ಸಾಹ ಮಾಡುತ್ತಾರೆ ಎಂದು ನಂಬಿ ಈ ಜೋತಾ ಸೂಚನೆಯನ್ನು ಒಪ್ಪುತ್ತೇನೆ.

ರಾಜಮಂತ್ರಪ್ರವೀಣ ಶ್ರೀ ಎಚ್. ಬಿ. ಗುಂಡಪ್ಪ ಗೌಡರು (ಹಾಸನ ಜಿಲ್ಲೆ).—ಈ ನಿರ್ಣಯದ ವಿಚಾರವಾಗಿ ಮಾತನಾಡುತ್ತಾ ಒಂದು ಸಮಾಚಾರವನ್ನು ತಿಳಿಸಬೇಕಾಗಿದೆ. ಈಗ ಗೃಹಕೈಗಾರಿಕೆಗಳ ಯೋಜನೆಯನ್ನು ಮಾಡಿ ಕೋಲಾರ ಮತ್ತು ಬೆಂಗಳೂರು ಜಿಲ್ಲೆಗಳಲ್ಲಿ ಆ ಕೈಗಾರಿಕೆಗಳನ್ನು ನಡೆಸುತ್ತಿದ್ದಾರೆ. ಅವು ಯಾವ ರೀತಿ ಕೆಲಸ ಮಾಡುತ್ತವೆಂಬುದನ್ನು ಕಾದು ನೋಡಬೇಕು. ಮುಖ್ಯವಾಗಿ ಹಳ್ಳಿಗಾಡಿನಲ್ಲಿ Village craftsmen ಇಲ್ಲದಿದ್ದರೆ ತೊಂದರೆ. ಹಿಂದೆ ಆಚಾರ್ರುಗಳು ಇದ್ದರು. ಬಾರಬಲೂತಿಯಲ್ಲಿ ಇವರೆಲ್ಲಾ ಸೇರಿದ್ದರು. ನೇಗಿಲು, ಗುಳ, ಗಾಡಿಪಟ್ಟೆ ಮುಂತಾದ ಸಾಮಾನುಗಳನ್ನೆಲ್ಲಾ ಹಿಂದೆ ಗೆಜ್ಜೆಗಾರರು ಹಳ್ಳಿಗಳಲ್ಲಿ ಮಾಡುತ್ತಿದ್ದರು. ಈಗ ಬಾರಬಲೂತಿ ಮಾಯವಾಗುತ್ತಿದೆ. ಕಾರಣ ಅವರಿಗೆ ಸರಿಯಾದ ಪ್ರೋತ್ಸಾಹವಿಲ್ಲ. ಹಿಂದೆ ರೈತರು ಬೆಳೆ ಬಂದಾಗ ಅವರಿಗೆಲ್ಲಾ ಹಂಚುತ್ತಿದ್ದರು. ಇವೆಲ್ಲಾ ಗ್ರಾಮ ಕೈಗಾರಿಕೆಗಳಿಗೆ ಸಂಬಂಧಪಟ್ಟಿವೆ. ಮನೆ ಕಟ್ಟುವ ಕೆಲಸಕ್ಕೆ ಬಡಗಿ ಇಲ್ಲದಿದ್ದರೆ ಬಹಳ ತೊಂದರೆ. ಮನೆ ಕಟ್ಟುವುದಕ್ಕೆ ಆಚಾರರು ಬರಬೇಕು. ಅದಕ್ಕೆ ಮುಂಗಡವಾಗಿ ಹಣ ಕೊಡಬೇಕು. ಅವನನ್ನು ಅನುಸರಿಸಿ ಇರುವ ಕಡೆಯಿಂದ ಕರೆದುಕೊಂಡು ಬರಬೇಕು. ಒಂದು ನೇಗಿಲಿನ ಮಳೆ ಬಿದ್ದುಹೋದರೆ ಅದನ್ನು ಸರಿಪಡಿಸಿಕೊಳ್ಳಲು ಬಾರದೆ ಆಚಾರ್ರನ್ನು ಹುಡುಕಿಕೊಂಡು ಹೋಗಬೇಕು. ಒಳ್ಳೆ ಬಿತ್ತನೆ ಕಾಲದಲ್ಲಿ ಏನಾದರೂ ತೊಂದರೆಯಾದರೆ ಆಚಾರ್ರ ಬಳಿಗೆ ಹೋಗಿ ಬರುವುದಕ್ಕೆ ಬಹು ಕಷ್ಟ. ಸಕಾಲದಲ್ಲಿ ಕೆಲಸ ಮಾಡಲು ತೊಂದರೆ. ಆದ್ದರಿಂದ ಗ್ರಾಮಗಳಲ್ಲಿ ಆಚಾರ್ರು ಬಡಗಿ ಮುಂತಾದವರಿರುವುದಕ್ಕೆ ಅವಕಾಶ ಮಾಡಬೇಕು. Village craftsmen ಗೆ ಸರಿಯಾದ ಶಿಕ್ಷಣ ಕೊಡಬೇಕು. ಹೀಗೆ ಮಾಡಿದರೆ ಹೆಚ್ಚು ಆಹಾರ ಬೆಳೆಯುವ ಯೋಜನೆಗೂ ಅನುಕೂಲ. ಗ್ರಾಮಸ್ಥರಿಗೆ ಬೇಕಾದ ಸಲಕರಣೆಗಳನ್ನು ಸರಿಯಾಗಿ ಒದಗಿಸಬೇಕು. ಎಲ್ಲೋ ಒಂದು ಕಡೆ ಸಹಕಾರ ಸಂಘ ಮಾಡಿದರೆ ಏನು ಪ್ರಯೋಜನ? ಯುವಕರು ಉತ್ಸಾಹ

(ಶ್ರೀ ಎಚ್. ಬಿ. ಗುಂಡಪ್ಪಗೌಡರು).

ದಿಂದ ಕೆಲಸ ಮಾಡಿದರೆ ಸಂತೋಷ. ಎಲ್ಲವನ್ನೂ ಸಮನಾದ ದೃಷ್ಟಿಯಿಂದ ನೋಡಿ ಎಲ್ಲರಿಗೂ ಅನುಕೂಲ ಕಲ್ಪಿಸಬೇಕು. ಭಾರಿ ಕೈಗಾರಿಕೆಗಳನ್ನು ಮಾಡುವುದಲ್ಲದೆ ಮೈಸೂರು ದೇಶದಲ್ಲಿರುವ ಅನೇಕ ಗ್ರಾಮಗಳಲ್ಲಿ ಬಡಗಿ, ಗೆಜ್ಜಿಗಾರ, ಆಚಾರ್ರು ಮುಂತಾದವರಿಗೆ ಸಹಾಯ ಮಾಡಿ ಅವರು ಅಲ್ಲಲ್ಲೇ ವಾಸ ಮಾಡುವುದಕ್ಕೆ ಅನುಕೂಲ ಕಲ್ಪಿಸಿ ಕೊಡಬೇಕು.

ಇನ್ನೊಂದು ವಿಚಾರ. ನೇಯ್ಗೆಯವರು ಮತ್ತು ಕೈಮಗ್ಗದವರ ವಿಚಾರ ಶ್ರೀ ಮಾದಯ್ಯನವರು ಬಹಳವಾಗಿ ಹೇಳಿದರು. ಈಗ ನೂಲನ್ನು ಸಹಕಾರ ಸಂಘಗಳ ಮೂಲಕ ಹಂಚಬೇಕೆಂದು ಆರ್ಡರೇನೋ ಇದೆ. ಮಾನ್ಯ ಆರ್ಥಿಕ ಸಚಿವರು ಕೂಡ ಅದನ್ನು ತಮ್ಮ ಭಾಷಣದಲ್ಲಿ ಹೇಳಿದ್ದಾರೆ. ಆ ರೀತಿ ಮಾಡುವುದಕ್ಕೆ ಅಡ್ಡಿಯಿಲ್ಲ. ಆದರೆ ವರ್ತಕರ ಕೈಗೆ ಸುತರಾಂ ನೂಲನ್ನು ಬಿಟ್ಟುಕೊಡದಂತೆ ಮಾಡಕೂಡದು. ಈಗ ನೂಲು ಕಾಳಸಂತೆಗೆ ಹೋಗುತ್ತಿದೆ. ಅದಕ್ಕೆ ಅವಕಾಶಕೊಡಬಾರದು. ಸೊಸೈಟಿಯಿಂದ ಹಂಚುವುದಾದರೂ ಕಾಲಕ್ಕೆ ಸರಿಯಾಗಿ ಸುಲಭವಾಗಿ ಸಿಕ್ಕದಿದ್ದರೆ ಏನು ಪ್ರಯೋಜನ ? ಕಾಳಸಂತೆಯಲ್ಲಿ ನೂಲು ಮಾರಾಟವಾಗುವುದಕ್ಕೆ ಅವಕಾಶವಾಗಿ ನೆಯ್ಗೆಯವರು ನೂಲು ಸಿಕ್ಕದೆ ಕಷ್ಟಪಡುತ್ತಿದ್ದಾರೆ. ಅವರಿಗೆ ಸಾಕಷ್ಟು ಸಿಕ್ಕುತ್ತಿಲ್ಲ. ಆದ್ದರಿಂದ ಏಕ್‌ದಂ ವರ್ತಕರಿಗೆ ಹೊಟ್ಟೆಯ ಮೇಲೆ ಹೊಡೆಯದೆ ಮದ್ರಾಸು ಮತ್ತು ಇತರ ಕಡೆಗಳಲ್ಲಿರುವಂತೆ ಸ್ವಲ್ಪವಾದರೂ ಕೊಡಿ. ಸೊಸೈಟಿಗಳು ಚೆನ್ನಾಗಿ ಕೆಲಸಮಾಡುವುದಾದರೆ ಅವುಗಳಿಗೆ ಈ ಜವಾಬ್ದಾರಿಯನ್ನು ಕ್ರಮೇಣ ಹೆಚ್ಚು ಮಾಡಬಹುದು.

ಶ್ರೀ ಟಿ. ಹನುಮಯ್ಯನವರು (ಚಿತ್ರದುರ್ಗ ಜಿಲ್ಲೆ—ನಿಮ್ನಪಂಗಡ).—ಮಾನ್ಯ ಅಧ್ಯಕ್ಷರೇ, ಶ್ರೀ ಮಾದಯ್ಯನವರು ತಂದಿರುವ ನಿರ್ಣಯವನ್ನು ಅನುಮೋದಿಸುತ್ತಾ ಕೆಲವು ಸಲಹೆಗಳನ್ನು ಸರ್ಕಾರದ ಗಮನಕ್ಕೆ ತರಲಿಚ್ಛಿಸುತ್ತೇನೆ. ಗ್ರಾಮೋದ್ಧಾರವಾಗಬೇಕಾದರೆ ಗ್ರಾಮಕೈಗಾರಿಕೆಗಳಿಗೆ ಹೆಚ್ಚು ಪ್ರೋತ್ಸಾಹ ಕೊಡಬೇಕು. ಗ್ರಾಮಾಂತರಗಳಲ್ಲಿ ಬಟ್ಟೆ ನೇಯುವುದು, ಚಾಪೆ ಹೆಣೆಯುವುದು, ಚರ್ಮ ಹದಮಾಡುವುದು, ಮಡಕೆ ಮಾಡುವುದು ಮುಂತಾದ ಕೈಗಾರಿಕೆಗಳಿವೆ. ಆದರೆ ಸರ್ಕಾರದವರು ಅದಕ್ಕೆ ಹೆಚ್ಚು ಹಣ ವೆಚ್ಚಮಾಡಿ ಪ್ರೋತ್ಸಾಹ ಸಾಕಷ್ಟು ನೀಡುತ್ತಿಲ್ಲ ಎಂಬುದನ್ನು ಗಮನಕ್ಕೆ ತರುತ್ತೇನೆ. ಎರಡು ಮೂರು ಜಿಲ್ಲೆಗಳಲ್ಲಿ ಮಾತ್ರ ಸರ್ ಎಂ. ವಿಶ್ವೇಶ್ವರಯ್ಯನವರ ಯೋಜನೆಯನ್ನು ಜಾರಿಗೆ ತಂದಿರುವಂತೆ ಉಳಿದ ಜಿಲ್ಲೆಗಳಲ್ಲೂ ಅದನ್ನು ಜಾರಿಗೆ ತರಬೇಕೆಂದು ಪ್ರಾರ್ಥಿಸುತ್ತೇನೆ. ಅದೂ ಅಲ್ಲದೆ ಬೆಳಗುಂಬ ಮತ್ತು ಕುಂಬಾಪುರದಲ್ಲಿ ಶ್ರೀ ನಾರಣಪ್ಪ ಎಂಬುವರು ಗ್ರಾಮ ಕೈಗಾರಿಕೆಗಳಿಗೆ ಯಾವ ರೀತಿ ಉತ್ತೇಜನ ಕೊಟ್ಟು ಪ್ರಚಾರಮಾಡುತ್ತಿದ್ದಾರೆ ಎಂಬುದು ಮಾನ್ಯ ಮಂತ್ರಿಗಳಿಗೆ ಗೊತ್ತಿರಬಹುದು. ಅವರ ಪ್ರೋತ್ಸಾಹದಿಂದ ಎಷ್ಟು ಅಭಿವೃದ್ಧಿಯಾಗಿದೆಯೋ ಅದೇ ರೀತಿ ಮೈಸೂರು ದೇಶದ ಎಲ್ಲಾ ಭಾಗಗಳಲ್ಲೂ ಕೂಡ ಮಾಡುತ್ತಾರೆಂದು ನಂಬಿದ್ದೇನೆ. ಹಾಗೆ ಖಂಡಿತಮಾಡಿದರೆ ಹಳ್ಳಿಗಳು ಉದ್ಧಾರವಾಗುತ್ತವೆ. ಅಂಥ ಜನರನ್ನು ತಯಾರುಮಾಡಬೇಕು. ಪ್ರೋತ್ಸಾಹಕೊಟ್ಟರೆ ಖಂಡಿತ ಅನೇಕರು ತಯಾರಾಗುತ್ತಾರೆ. ಗ್ರಾಮಾಂತರಗಳಲ್ಲಿ ಬೇಕಾದ ಗಾಡಿಪಟ್ಟೆ, ಗುಳ ವಗೈರೆ ಸಾಮಾನುಗಳಿಗೆ ಬಹಳ ತೊಂದರೆಯಿದೆ. ಕಬ್ಬಿಣ ಸರಿಯಾಗಿ ಸಿಕ್ಕುತ್ತಿಲ್ಲ. ಅನೇಕ ರೈತರು ಗಾಡಿಪಟ್ಟೆಗಳಿಗೆ ಲಂಚಕೊಟ್ಟು ತರಬೇಕಾಗಿದೆ.

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಹೋದ ವರ್ಷ ಮತ್ತು ಈ ವರ್ಷ ಗುಳ, ಗಾಡಿಪಟ್ಟೆ ಮುಂತಾದುವನ್ನು ಸುಮಾರು 3,000 ಚಿಲ್ಲರೆ ಟನ್ನಷ್ಟು ಹಂಚಲು ಏರ್ಪಾಡುಮಾಡಿದೆ. ಪ್ರಾಯಶಃ ಮಲ್ಟಿಪರ್ಪಸ್ ಕೋ-ಆಪರೇಟಿವ್ ಸೊಸೈಟಿಗಳಿರುವ ಕಡೆ ಹಂಚಲಾಗಿದೆ. ಗಾಡಿಪಟ್ಟೆಗೆ ಎಲ್ಲೂ ಅಭಾವವಿಲ್ಲ.

ಶ್ರೀ ಟಿ ಹನುಮಯ್ಯನವರು.—ಆದರೆ ನೇರವಾಗಿ ರೈತರಿಗೆ ಸಿಕ್ಕುವಹಾಗೆ ಮಾಡಿಲ್ಲ. ನೂಲು ವರ್ತಕರಿಂದ ಸಲೀಸಾಗಿ ದೊರೆಯುವುದು ಕಷ್ಟ.

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅದು ಸರಿಯಲ್ಲ. ಬರೀ ಸೊಸೈಟಿಯ ಮೂಲಕವೇ ಹಂಚಲು ಏರ್ಪಾಡಿದೆಯೇ ಹೊರತು ವರ್ತಕರಿಗೆ ಒಂದು ಟನ್ ಕೂಡ ಕೊಟ್ಟಿಲ್ಲ.

ಶ್ರೀ ಟಿ. ಹನುಮಯ್ಯನವರು.—ಗುಳ, ಗಾಡಿಪಟ್ಟೆ ಮುಂತಾದುವನ್ನು ಮಾಡಲು ಸರ್ಕಾರದವರು ಹೆಚ್ಚು ಪ್ರೋತ್ಸಾಹ ಕೊಟ್ಟರೆ ಗ್ರಾಮದಲ್ಲಿರುವ ರೈತರಿಗೆ ಹೆಚ್ಚು ಬೆಳೆ ಬೆಳೆಯಲು ಸಹಾಯವಾಗುತ್ತದೆ. ಆದ್ದರಿಂದ ಹೆಚ್ಚು ಪ್ರೋತ್ಸಾಹಕೊಡಬೇಕೆಂದು ಪ್ರಾರ್ಥಿಸುತ್ತೇನೆ.

ಮುಖ್ಯವಾಗಿ ಈಗಿನ ಬಟ್ಟೆಯ ಅಭಾವ ಪರಿಸ್ಥಿತಿಯಲ್ಲಿ ನೂಲಿನ ಅಭಾವ ಬಹಳವಾಗಿದೆ. ನಿಜವಾಗಿಯೂ ನೇಯತಕ್ಕವರಿಗೆ ನೂಲು ನೇರವಾಗಿ ಸಿಕ್ಕಬೇಕೇ ಹೊರತು ಮಧ್ಯಸ್ಥಗಾರರು ಕೊಡುವುದು ಸರಿಯಲ್ಲ. ಏಕೆಂದರೆ......

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಶ್ರೀ ಗುಂಡಪ ಗೌಡರು ಆರೀತಿ ಹೇಳಿದ್ದಾರೆ.

ಶ್ರೀ ಟಿ ಹನುಮಯ್ಯನವರು.—ಹೇಳಿದ್ದರೂ ನಾನು ಹೇಳುವುದೇನೆಂದರೆ ನಿಜವಾಗಿಯೂ ವರ್ತಕರ ಹತ್ತಿರ ಹೋಗಿ ತಮಗೆ ಬೇಕಾದಷ್ಟು ನೂಲು ತೆಗೆದುಕೊಂಡು ಬಂದು ನೂಲುವುದಕ್ಕೆ ಕಷ್ಟವಾಗುತ್ತಿದೆ. ಈಗ ನೀವು ಮಲ್ಟಿಪರ್‌ಪಸ್ ಸೊಸೈಟಿಗಳನ್ನು ಮಾಡಿರುವುದರಿಂದ ಆ ಸೊಸೈಟಿಗಳ ಮೂಲಕ ಮಾರಾಟ ಮಾಡಬೇಕು, ಗ್ರಾಮಕೈಗಾರಿಕೆ ಉದ್ಧಾರವಾಗಬೇಕು ಎಂಬ ಸದುದ್ದೇಶದಿಂದಲೇ ಮಲ್ಟಿಪರ್‌ಪಸ್ ಕೋ-ಆಪರೇಟೀವ್ ಸೊಸೈಟಿಗಳನ್ನು ಏರ್ಪಡಿಸಿದಿರಿ. ಹಾಗಿರುವಾಗ ಅದರ ಮೂಲಕ ವ್ಯಾಪಾರಮಾಡುವುದನ್ನು ಬಿಟ್ಟು ವರ್ತಕರಿಗೆ ಮುಕ್ಕಾಲುಭಾಗ ಕೊಟ್ಟು, ಕಾಲುಭಾಗ ನೇರವಾಗಿ ಕೊಡುವುದು ಸರಿಯಲ್ಲ. ಈಗ ಈ ರೀತಿ ಒಂದು ವೇಳೆ ಆರ್ಡರ್‌ಮಾಡಿದ್ದರೆ ವಾಪಸು ತೆಗೆದುಕೊಂಡು ಮಲ್ಟಿಪರ್‌ಪಸ್ ಕೋ-ಆಪರೇಟೀವ್ ಸೊಸೈಟಿಗಳ ಮೂಲಕವೇ ಮಾರಾಟಮಾಡಬೇಕೆಂದು ಮಾಡಬೇಕು. ನೂಲತಕ್ಕವರಿಗೆ ಹೆಚ್ಚು ಅವಕಾಶಗಳನ್ನು ಕಲ್ಪಿಸಿಕೊಟ್ಟು ನೇರವಾಗಿ ನೂಲು ಸಲ್ಲುವಂತೆ ಏರ್ಪಾಡುಮಾಡಬೇಕೆಂದು ಹೇಳಿ ಈ ಖೋತಾ ನಿರ್ಣಯವನ್ನು ಅನುಮೋದಿಸುತ್ತೇನೆ.

The Hon'ble Sri H. C. DASAPPA.—Sir, I am also thankful to the Hon'ble mover of this cut motion to have brought it with the solitary idea of discussing the policy of Government so far as cottage industries are concerned and to emphasise the need for greater encouragement to them. On that I assure the House

that the Government are one with the Hon'ble Mover and the other Members. I think this is not the hour to detain the House to explain the various stepsthat Government have taken to encourage cottage industries. But I would only refer to certain points raised by the various speakers. One point was that there should be a separate officer for looking after cottage industries. We have two officers of Deputy Commissioner's status to look after, one with regard to cottage industries in general and the other with regard to rural industrialisation scheme of Sir M. Visvesvaraya in two Districts. I think that would satisfy the Hon'ble Member because there is a real desire to see that these cottage industries are planned and programmed well and while the one looks after these two districts the other looks after the present centres which we have established in the 3-year plan and also cottage industries in general.

Sri M. Madiah suggested that when we have taken these two districts, we can take a taluk in every district and start intensive industrialisation. Sir, I am one with him in that respect. This is a new experiment which is being watched very carefully in fact. The All India Manufacturers' Association wanted to depute some people to study the experiment. I said, "do not come now, it is too early, because this is the one and only place where we are trying to implement that scheme of Sir M. Visvesvaraya." Let me assure, so far as these two districts are concerned, that Sir M. Visvesvaraya himself is the Chairman of this high power committee. So, that is looking after and enjoying wide powers, autonomous powers so far as the grant given for the purpose is concerned.

Then, with regard to other taluks, I must say that I must think over the matter. I cannot easily start them in other districts because it requires a closer attention by an officer for sometime to come. No doubt the basic principle of that scheme is for allowing the local enterprise and local leaders to look after everything. Subscription at the rate of eight annas is collected from each family ; they elect the committee members ; the committee elects its own Chairman and its own Inspector and so the Government can only guide. So, unless local people in a taluk come forward to take up the responsibility for the scheme in that taluk, it would be very difficult for Government to find the necessary staff and establishment for watching this work in every taluk. That has got to be done very cautiously.

The other question is about the scholarships. I must say that the Mysore Government have instituted a large number of scholarships. I quite see that the amount may not be sufficient in these hard days of living. In fact we have already stepped up the quantum of scholarship in some places. More than that we are very willing to do but it is a question of financial difficulties.

Then Sri H. B. Gundappa Gowda, Sri Hanumiah and Sri M. Madiah referred to the weavers and their position. I can say this much. Government had an establishment costing Rs. 70,000 for looking after the weaving administration, yarn depots, and so on. All that, in a body, has been transferred over to the Provincial Weavers' Co-operative Society and it is being run under the Co-operative Department and The Hon'ble Sri T. Mariappa is in charge of that. It is not a small sum: 70,000 rupees for one industry like weaving industry, apart from the supervisory staff we have got. The question is, that this society must have been abled to function effectively by securing the sole right for yarn distribution. I found two views. Sri H. B. Gundappa Gowda said, " you should not choke up the normal trade channel all on a sudden." Sri T. Hanumiah said that the whole of the yarn must be distributed through the Weavers' Society or where do not exist, through Multipurpose Society." You will see, Sir, what the difficulty of the Government is. The intention of the Government is that designing, marketing, all these things should be done by the societies just as they are trying to do in Madras. We want to do it. There is some point in what Sri Gundappa gowda said. We cannot choke up trade channels all on a sudden. We have come to a

compromise now. It would be 66 2/3 from the Societies and 33 1/3 from Yarn Dealers. I suppose I state this for the first time on the floor of the House because the order was only passed yesterday.

Sri H. B. GUNDAPPA GOWDA.—It i very fair.

The Hon'ble Sri H. C. DASAPPA.—I think the House will accept it as a very reasonable compromise.

Sri S. Rangaramiah said about the coir development industry in the State. We have started an exceedingly fine institution in a place not far from his own jurisdiction *i.e.*, Nanjangud. I hope he has seen it. I have been asking many friends to go and see the work done there; it has been notified in the papers; a Press Note has been issued nearly a year ago. It is just near the railway line in Nanjangud. We have an expert there who has come from Travancore, and he is doing marvellous work.

Sri S. RANGARAMIAH.—I wish another is started at Chamarajanagar where more cocoanut is grown.

The Hon'ble Sri H. C. DASAPPA.—I will gladly do it. Let me close. The Whip has said that I should be brief. (Laughter).

The point is this. With regard to cottage industries, I want to make it absolutely clear beyond doubt that it is impossible for the Government by themselves to develop cottage industries in any country. It is only where local enterprise and initiative and leadership come forward, cottage industries can be a success, whether it is in Japan or any where else. Government can do their very best to take steps to provide a fillip, start and give the industry a little momentum. Further than that, its continuance must rest, I should say, not only mainly but solely, on local enterprise and leadership. So Sir, I would like to assure this House and through this House the people at large that local enterprise must take increasing interest in the matter of these cottage industries. So far as Government are concerned, whenever any particular proposition comes up, I assure the House that the Government will fully consider it and do its very best.

Sri M. MADIAH.—ನನ್ನ ಖೋತಾ ಸೂಚನೆ ಯನ್ನು ವಾಪಸುತೆಗೆದುಕೊಳ್ಳಲು ಸಭೆಯ ಅನುಮತಿ ಬೇಡುತ್ತೇನೆ.

The cut motion was, by leave of the House, withdrawn.

Mr. SPEAKER.—The question is:

"That a sum not exceeding Rs. 35,73,600 be granted to the Government to defray the charges which will come in course of payment during the year ending 31st day of March 1952, in respect of 'Industries and Supplies' (Except Sericulture).'

The motion was adopted.

Mr. SPEAKER.—The House will now rise for lunch for half-an-hour.

The Assembly adjourned for lunch at Twenty-five Minutes past Ten of the Clock and reassembled at Fifty-five Minutes past Ten of the clock, Mr. Speaker (The Hon'ble Sri V. Venkatappa) in the Chair.

DEMAND No. 27—SERICULTURE.

43 (a)—4—Sericulture.

The Hon'ble Sri T. MARIAPPA (Home Minister).—Sir, on the recommendation of His Highness the Maharaja, I beg to move:

"That a sum not exceeding Rs. 10,35,400 be granted to the Government to defray the charges which will come in course of payment during the year ending 31st day of March 1952, in respect of 'Sericulture'."

Mr. SPEAKER.—Motion moved:

"That a sum not exceeding Rs. 10,35,400 be granted to the Government to defray the charges which will come in course of payment during the year ending 31st day of March 1952, in respect of "Sericulture."

The cut motion on this Demand is disallowed.

Sri G. NARAYANA GOWDA (Kolar District—General).—I may be permitted to speak on the Demand itself.

ಅಧ್ಯಕ್ಷರು.—ಆಗಬಹುದು.

ಶ್ರೀ ಜಿ. ನಾರಾಯಣಗೌಡರು.—ಅಧ್ಯಕ್ಷರೇ, ನಮ್ಮ ದೇಶದಲ್ಲಿ ರೇಷ್ಮೆ ಕೈಗಾರಿಕೆ ದೇಶದ ಜನತೆಯ ಆರ್ಥಿಕ ಸ್ಥಿತಿಯನ್ನು ಎಷ್ಟೋ ಮಟ್ಟಿಗೆ ಉತ್ತಮಗೊಳಿಸುತ್ತಿದೆ ಎಂಬುದು ನಿರ್ವಿವಾದವಾದ ವಿಷಯ. ಇಂತಹ ಕೈಗಾರಿಕೆಯನ್ನು ನಮ್ಮ ದೇಶದಲ್ಲಿ ಇನ್ನೂ ಉತ್ತಮಪಡಿಸಲು ನಮ್ಮ ಸರ್ಕಾರ ಈಗ ಎಷ್ಟು ಸೌಕರ್ಯಗಳನ್ನು ಕಲ್ಪಿಸಿದೆಯೋ ಅದಕ್ಕಿಂತಲೂ ಹೆಚ್ಚಾಗಿ ಕಲ್ಪಿಸಬೇಕೆಂದು ಕೇಳಿಕೊಳ್ಳುತ್ತೇನೆ. ನಮ್ಮ ದೇಶದಲ್ಲಿ ಈ ಕೈಗಾರಿಕೆಯಲ್ಲಿ ತೊಡಗಿರುವವರಲ್ಲಿ ಸುಮಾರು ಮೂರು ತರಹೆಯ ಜನರಿದ್ದಾರೆ. ಹಿಪ್ಪುನೇರಳೆಯನ್ನು ಬೆಳೆಯುವವರು, ರೇಷ್ಮೆಗೂಡು ತಯಾರುಮಾಡುವವರು ಮತ್ತು ಮೂರನೆಯವರು ರೀಲರ್‌ಗಳು, ಎಂದರೆ ದಾರವನ್ನು ಮಾಡುವವರು. ಈ ಕೈಗಾರಿಕೆಯನ್ನು ಮುಖ್ಯ ಕಸಬಾಗಿಟ್ಟುಕೊಂಡಿರುವವರೂ ಇದ್ದಾರೆ. ಹಾಗಿಲ್ಲದೆ ಇದನ್ನು ಉಪಕಸಬಾಗಿಟ್ಟುಕೊಂಡು ಈ ಕೈಗಾರಿಕೆಯಲ್ಲಿ ತೊಡಗಿರುವವರೂ ಇದ್ದಾರೆ. ನಮ್ಮ ದೇಶದಲ್ಲಿ ಸಂಗ್ರಹಿಸಿರುವ ಅಂಕಿಅಂಶಗಳನ್ನು ನೋಡಿದರೆ, 1,2[illegible],000 ಸಂಸಾರಗಳು ಒಂದಲ್ಲ ಒಂದು ರೀತಿಯಲ್ಲಿ ಈ ಕೈಗಾರಿಕೆಯಿಂದ ಉತ್ಪತ್ತಿಯನ್ನು ಪಡೆಯುತ್ತಿವೆ. ಭಾರತದಲ್ಲಿ ಒಟ್ಟು ಉತ್ಪತ್ತಿಯಾಗುವ 21 ಲಕ್ಷ ಪೌಂಡು ರೇಷ್ಮೆಯಲ್ಲಿ ಮೈಸೂರು ದೇಶವೊಂದೇ 16 ಲಕ್ಷ ಪೌಂಡುಗಳಷ್ಟು ಕಚ್ಚಾ ರೇಷ್ಮೆಯನ್ನು ತಯಾರುಮಾಡುತ್ತಿದೆ. ಎಂದರೆ, ಶೇಕಡ 80ರಷ್ಟು ಕಚ್ಚಾ ರೇಷ್ಮೆ ನಮ್ಮ ಸಂಸ್ಥಾನದಲ್ಲೇ ತಯಾರಾಗುತ್ತಿದೆ. ಇದಕ್ಕೆ ಪ್ರೋತ್ಸಾಹ ಕೊಟ್ಟು ಮುಂದುವರಿಸಿಕೊಂಡು ಬಂದರೆ, ನಮ್ಮ ದೇಶದ ಜನರ ಆರ್ಥಿಕ ಸ್ಥಿತಿಯನ್ನು ಇನ್ನೂ ಉತ್ತಮಪಡಿಸಲು ಅತ್ಯುತ್ತಮ ಸಾಧನವಾಗುತ್ತದೆಂದು ನನ್ನ ಭಾವನೆ. ನಮ್ಮ ದೇಶದಲ್ಲಿ ಈ ಕೈಗಾರಿಕೆಗೆ ಕೆಲವು ತೊಂದರೆಗಳಿವೆ. ಹಿಪ್ಪುನೇರಳೆಯ ವಿಚಾರದಲ್ಲಿ ಪ್ರವೀಣರ ಅಭಿಪ್ರಾಯದಂತೆ, ನಾಲ್ಕು ತರಹೆಯವು ಇವೆ. ಇವುಗಳಲ್ಲಿ ಎರಡು ತರಹ ಅಥವ ಜಾತಿಯವು ಬಹಳ deteriorate ಆಗಿವೆ, ಪ್ರಯೋಜನವಿಲ್ಲವೆಂದು ಹೇಳುತ್ತಾರೆ. ಇಂಥವುಗಳನ್ನು ಹೋಗಲಾಡಿಸಿ, ಉತ್ತಮವಾದ ಹಿಪ್ಪುನೇರಳೆಯನ್ನು ಜನರಿಗೆ ಒದಗಿಸಿ ಕೊಟ್ಟು ಈ ಕೈಗಾರಿಕೆಯನ್ನು ಮುಂದುವರಿಸಿಕೊಂಡು ಬರಬೇಕು. ಎರಡನೆಯದಾಗಿ ರೇಸ್ ಕರ್ಕೂ ಎಂಬುದು 50 ವರ್ಷದ್ದು. ಇದರಿಂದ ನಮಗೆ ಒಳ್ಳೆಯ ಬೀಜ ಸಿಕ್ಕುತ್ತಿಲ್ಲ. ಆದುದರಿಂದ ಹೊರದೇಶಗಳಿಂದ ಒಳ್ಳೆಯ ರೇಸ್ ಕರ್ಕೂಗಳನ್ನು ತರಿಸಿಕೊಂಡು ರೋಗರಹಿತವಾದ ಮೊಟ್ಟೆಯನ್ನು ತಯಾರಿಸಿ ಜನರಿಗೆ ಹಂಚಿದರೆ, ಈಗ ಜನರು ರೋಗದಿಂದ ಕೂಡಿದ ಮೊಟ್ಟೆಯನ್ನು ತೆಗೆದುಕೊಂಡು ನಷ್ಟಪಡುವುದು ನಿಂತು ರೋಗರಹಿತವಾದ ಮೊಟ್ಟೆಯಿಂದ ಒಳ್ಳೆಯ ಗೂಡನ್ನು ಬೆಳೆಯುವುದಕ್ಕೆ ಸಾಧ್ಯವಾಗುತ್ತದೆ. ಮೂರನೆಯದಾಗಿ, ಈಗ ಚರಕ ಇದೆ. ಅದನ್ನು ಉತ್ತಮಗೊಳಿಸಿ ಒದಗಿಸಿಕೊಟ್ಟು ಅದರಿಂದ ರೇಷ್ಮೆಯನ್ನು ತಯಾರುಮಾಡಲು ಏರ್ಪಾಡು ಮಾಡಬೇಕು. ಈಗ ನಮ್ಮ ಸರ್ಕಾರದವರು ಜಪಾನಿನಿಂದ ಒಂದು ರೀಲಿಂಗ್ ಯಂತ್ರವನ್ನು ತಂದು ಸಂಶೋಧನೆ ನಡೆಸುತ್ತಿದ್ದಾರೆ. ಇಂತಹ ಯಂತ್ರಗಳನ್ನು ಹೆಚ್ಚಾಗಿ ತರಿಸಿ ಖಾಸಗಿ ಜನರಿಗೆ ಕೊಟ್ಟು ಅದರಿಂದ ಒಳ್ಳೆಯ ದರ್ಜೆಯ ದಾರ ಉತ್ಪತ್ತಿಯಾಗುವಹಾಗೆ ಸರ್ಕಾರದವರು ಮಾಡಬೇಕು.

ಇನ್ನೊಂದು ವಿಷಯ, ಮುಖ್ಯವಾದುದು—ಏನೆಂದರೆ, ಗೂಡು ಬೆಳೆಯುವವರ ಮೇಲೆ ಮಾರಾಟ ತೆರಿಗೆಯನ್ನು ಹಾಕಿದ್ದಾರೆ. ತೆರಿಗೆಯನ್ನೇ ಹಾಕಬಾರದೆಂದು ಹೇಳುವುದಿಲ್ಲ. ಈ ಗೂಡು ಬೆಳೆಯುವವರು ಸಾಧಾರಣವಾಗಿ ಅನಕ್ಷರಸ್ಥರು. ಅವರಿಗೆ ಅರ್ಧ ಎಕರೆ ಅಥವ ಒಂದು ಎಕರೆಯ ಮೇಲೆ ತೋಟವಿರುವುದಿಲ್ಲ. 7,500 ರೂಪಾಯಿ ವಾರ್ಷಿಕ ಕಂದಾಯ ಅನೇಕರಿಗೆ ಬರುತ್ತಿಲ್ಲ. ಅವರಿಗೆ ತೆರಿಗೆ ಹಾಕಿರುವುದರಿಂದ ಬಹಳ ಕಷ್ಟವಾಗಿದೆ. ಇದರ ಸಂಬಂಧವಾಗಿ ಲೆಕ್ಕಪತ್ರಗಳನ್ನಿಡಲು ಅವರಿಗೆ ಸಾಧ್ಯವಿಲ್ಲ.

ಇಂಥ ಸಂದರ್ಭದಲ್ಲಿ ಅವರ ಮೇಲೆ ಮಾರಾಟದ ತೆರಿಗೆಯನ್ನು ವಿಧಿಸಿರುವುದು ಸರಿಯಲ್ಲ. ಅನೇಕರಿಗೆ ಓದು ಬರಹ ಬಾರದೆ ಲೆಕ್ಕಪತ್ರಗಳನ್ನಿಡುವುದಕ್ಕೆ ಸಾಧ್ಯವಿಲ್ಲ. ಹೀಗಾಗಿ ಅವರಿಗಿದು ಬಹಳ ತೊಂದರೆಗೆ ಕಾರಣವಾಗಿದೆ. ಇಲಾಖೆಯವರೋ ಸತತ ಎಲ್ಲರಿಗೂ ಒಂದೇ ಸಮನಾಗಿ ನೋಟೀಸನ್ನು ಕೊಡುತ್ತಿದ್ದಾರೆ. ಆದ್ದರಿಂದ ಈ ತೆರಿಗೆಯನ್ನು ಮುಖ್ಯವಾಗಿ ಅವರಿಗೆ ತಪ್ಪಿಸಬೇಕು. ಇಲ್ಲದಿದ್ದರೆ ಅನಕ್ಷರಸ್ಥರಾಗಿ ಲೆಕ್ಕಪತ್ರಗಳನ್ನಿಡದೆ ಈಗಾಗಲೇ ಬಹಳ ತೊಂದರೆಗೊಳಗಾಗಿದ್ದಾರೆ. ಆದ್ದರಿಂದ ಗೂಡು ತಯಾರಿಸುವವರ ಮೇಲೆ ಈ ತೆರಿಗೆ ಹಾಕುವುದನ್ನು ಬಿಟ್ಟು ಅದನ್ನು ರೇಷ್ಮೆ ದಾರರ ಮೇಲೆ ಹಾಕುವುದು ಒಳ್ಳೆಯದೆಂದು ಹೇಳುತ್ತೇನೆ.

ಒಟ್ಟಿನಲ್ಲಿ ನಮ್ಮ ಈ ಕೈಗಾರಿಕೆಗಿರುವ ಈ ಎಲ್ಲಾ ತೊಂದರೆಗಳನ್ನೂ ಹೋಗಲಾಡಿಸುವುದಕ್ಕಾಗಿ ನಾನೊಂದು ಸಲಹೆ ಮಾಡುತ್ತೇನೆ. ಹಿಪ್ಪುನೇರಳೆ ಬೆಳೆಯುವವರು, ಗೂಡನ್ನು ತಯಾರಿಸುವವರು ಮತ್ತು ರೀಲರುಗಳು—ಇವರುಗಳಲ್ಲಿ ಒಬ್ಬೊಬ್ಬರಲ್ಲಿಯೂ ಪ್ರಾಮುಖ್ಯರಾದವರನ್ನು ಬರಹೇಳಿ ಒಟ್ಟಿಗೆ ಸೇರಿಸಿ ಒಂದು ಚರ್ಚಾಕೂಟವನ್ನೇರ್ಪಡಿಸಿದರೆ ಅವರು ಎಲ್ಲ ವಿಷಯಗಳನ್ನೂ ಪರಿಶೀಲನೆಗೆ ತೆಗೆದುಕೊಂಡು ಚರ್ಚೆಮಾಡಿ ತೀರ್ಮಾನಕ್ಕೆ ಬರುವವರು, ಅಲ್ಲಿಂದ ಬಂದ ತೀರ್ಮಾನಗಳನ್ನೂ ಸಲಹೆಗಳನ್ನೂ ಸರ್ಕಾರದವರು ಪರಿಶೀಲಿಸಿ ಅವುಗಳನ್ನು ಕಾರ್ಯಗತಮಾಡಿಕೊಡಬೇಕೆಂದು ಸರಕಾರವನ್ನು ಕೇಳಿಕೊಳ್ಳುತ್ತೇನೆ.

Sri M. V. KRISHNAPPA.—I move for closure, Sir.

Mr. SPEAKER. - The Question is :—

"That the question be not put.,",

The motion was adopted.

ಮಾನ್ಯ ಶ್ರೀ ಟಿ. ಮರಿಯಪ್ಪನವರು (ಒಳಾಡಳಿತ ಸಚಿವರು).—ಮಾನ್ಯ ಅಧ್ಯಕ್ಷರೇ, ರೇಷ್ಮೆ ಕೈಗಾರಿಕೆ ನಮ್ಮ ದೇಶದಲ್ಲಿ ಅಭಿವೃದ್ಧಿಗೆ ಬರಬೇಕೆಂಬುದರಲ್ಲಿ ಭಿನ್ನಾಭಿಪ್ರಾಯವಿಲ್ಲ. ಸುಮಾರು 80,000 ಎಕರೆಗಳ ಮೇಲೆ ಹಿಪ್ಪುನೇರಳೆ ಸೊಪ್ಪನ್ನು ನಮ್ಮ ದೇಶದಲ್ಲಿ ಬೆಳೆಯುತ್ತಿದ್ದಾರೆ. ಮೈಸೂರು ಡಿಸ್ಟ್ರಿಕ್ಟಿನಲ್ಲಿ 50,000 ಎಕರೆಗಳ ಮೇಲಿದೆ. ಬೆಂಗಳೂರು, ಕೋಲಾರ ಪ್ರದೇಶದಲ್ಲಿಯೂ ಬಹಳ ಚೆನ್ನಾಗಿ ಅಭಿವೃದ್ಧಿಯಾಗುತ್ತಿದೆ. ಈ ಕೈಗಾರಿಕೆ ಇನ್ನೂ ಅಭಿವೃದ್ಧಿಗೆ ಬರಬೇಕೆಂದು ಸರ್ಕಾರದವರು ಅನೇಕ ಕಾರ್ಯಕ್ರಮಗಳನ್ನು ಕೈಕೊಂಡಿದ್ದಾರೆ.

ರೇಷ್ಮೆ ಕೈಗಾರಿಕೆ ಅಭಿವೃದ್ಧಿಯಾಗಬೇಕಾದರೆ ಕೇಂದ್ರದವರ ಸಹಾಯವೂ ನಮಗೆ ಸಂಪೂರ್ಣವಾಗಿ ಬೇಕು. ಅವರೂ ಈಗಾಗಲೇ ಸಿಲ್ಕ್ ಬೋರ್ಡ್ ಎಂದು ಏರ್ಪಾಡುಮಾಡಿ ಈ ಸಂಬಂಧದಲ್ಲಿ ಎಲ್ಲಾ ಕಾರ್ಯಕ್ರಮಗಳನ್ನೂ ತೆಗೆದುಕೊಳ್ಳುವ ಮಾರ್ಗದಲ್ಲಿ ಹೊರಟಿದ್ದಾರೆ. ಈ ವಿಚಾರದಲ್ಲಿ ಒಂದು ಕಾನೂನು ಮಾಡಬೇಕಾದ ಸಂದರ್ಭವೂ ಒಂದೆರಡು ಅಂಶಗಳಲ್ಲಿ

(ಮಾನ್ಯ ಶ್ರೀ ಟಿ. ಮರಿಯಪ್ಪನವರು.)

ಇದೆ. ರೋಗರಹಿತವಾದ ಮೊಟ್ಟೆಮಾರಬೇಕೆಂದು ಎಲ್ಲರೂ ಒಪ್ಪುತ್ತಾರೆ. ಆದರೆ ಇದು ಸಾಮಾನ್ಯವಾಗಿ ಜಾರಿಗೆ ಬರಬೇಕಾದರೆ ಕಾನೂನಿನ ಪ್ರತಿಬಂಧಕವಿದ್ದೇ ಇರಬೇಕು. ಈ ವಿಚಾರ ಕೇಂದ್ರ ಸರ್ಕಾರದವರ ಗಮನಕ್ಕೂ ಬಂದಿದೆ. ಅದೃಷ್ಟವಶಾತ್ ನಮ್ಮ ದೇಶ ದಲ್ಲಿ ಈ ವಿಚಾರದಲ್ಲಿ ಜನಾಭಿಪ್ರಾಯ ಅನುಕೂಲ ವಾಗಿದೆ. ಕೇಂದ್ರ ಸರ್ಕಾರದವರೂ ಒತ್ತಾಯ ತರುತ್ತಿದ್ದಾರೆ.

ಎರಡನೆಯದಾಗಿ ಪ್ರಾಮುಖ್ಯವಾಗಿ ನಮ್ಮ ದೇಶ ದಲ್ಲಿ ನಡೆಯಬೇಕಾದ್ದು basic work. ಇದು ನಡೆಯ ಬೇಕಾದರೆ, ಇದರಲ್ಲಿ research ಮಾಡುವ ಕೇಂದ್ರ ಗಳಿಗೆ ದೊಡ್ಡ ದೊಡ್ಡ ಹಿಪ್ಪುನೇರಳೆ ತೋಟಗಳನ್ನು attach ಮಾಡಬೇಕು. ಆದರೆ ಅಂಥಾ ವಿಸ್ತಾರವಾದ ತೋಟಗಳು ನಮ್ಮಲ್ಲಿ ಎಲ್ಲೂ ಇಲ್ಲ. ನಮ್ಮಲ್ಲಿರುವು ದೆಲ್ಲಾ 5 ಎಕರೆ, 10 ಎಕರೆ ತೋಟಗಳೇ ಜಾಸ್ತಿ. ಒಟ್ಟು 75 ಎಕರೆಗಳ ಮೇಲೆ ಎಲ್ಲೂ ಇಲ್ಲ. ಆದ್ದರಿಂದ ಇತ್ತೀಚೆಗೆ ಶ್ರೀ ಸಿದ್ದಯ್ಯನವರ ಕೃಪೆಯಿಂದ ದೇವನ ಹಳ್ಳಿಯಲ್ಲಿ ಒಂದು ಕಡೆ 100 ಎಕರೆಗಳ ಒಂದು ಪ್ರದೇಶ ವನ್ನೂ ಕಣ್ವಪ್ರಾಜೆಕ್ಟ್ ಕೆಳಗೆ 30 ಎಕರೆಗಳಒಂದು ಪ್ರದೇಶವನ್ನೂ ಇದಕ್ಕಾಗಿ ದೊರಕಿಸಿದ್ದಾರೆ. ದಿನೇ ದಿನೇ ಬೆಳೆಯುತ್ತಿರುವ ಈ ಕೈಗಾರಿಕೆಗಾಗಿ ಸರ್ಕಾರ ದವರು ಒಂದು Experimental Stationನ್ನು ಮಾಡದೆ ಹೋದರೆ ಈ ತೋಟಗಳೂ deteriorate ಆಗುತ್ತವೆ, ಕರ್ಕೂಗಳೂ deteriorate ಆಗುತ್ತವೆ ಎಂಬುದು ನಮ್ಮ ಅನುಭವದಲ್ಲಿದೆ. ಕೇಂದ್ರ ಸರ್ಕಾರ ದವರೂ ಕೂಡ ಸಿಲ್ಕ್‌ಬೋರ್ಡಿನವರ ತೀರ್ಮಾನದಂತೆ ಇದಕ್ಕೆ ಸಹಾಯ ಮಾಡುವುದಾಗಿ ಹೇಳಿದ್ದರು. ಆದರೆ ಹಣದ ಅಭಾವದ ದೆಸೆಯಿಂದ ಹೋದ ವರ್ಷ ಅವರು ಕೊಡಲಿಲ್ಲ. ಈ ವರ್ಷ ಬರಬಹುದು. ಮೈಸೂರು ಸರ್ಕಾರದವರೂ ಈ ಒಂದು ಸಂಶೋಧನಾ ಕೇಂದ್ರ ಮತ್ತು ಪಾಠಶಾಲೆಯನ್ನು ಏರ್ಪಾಡು ಮಾಡಬೇಕೆಂದು ಹೇಳಿ 11 ಲಕ್ಷ ರೂಪಾಯಿಗಳನ್ನು ತೆಗೆದಿಟ್ಟಿದ್ದರು. ಆದರೆ ಕೇಂದ್ರ ಸರ್ಕಾರದವರ ಸಹಾಯ ಬರದೆ ಸದ್ಯಕ್ಕೆ ನಿಲ್ಲಿಸಬೇಕಾಯಿತು. ಈಗ ಜಪಾನ್ ದೇಶದ ಜಾತಿಯನ್ನು ತರಿಸಿ ಮೈಸೂರಿನದಕ್ಕೂ cross ಮಾಡಿಸುವ ಪ್ರಯತ್ನ ಮಾಡಿದ್ದೇವೆ. ಈ ಜಾತಿ ನಮ್ಮ ದೇಶಕ್ಕೆ ಬಹಳ ಅನುಕೂಲವಾದುದೆಂದು ಕಂಡು ಬಂದಿದೆ. ಬಿಳಿಗಿರಿರಂಗನಬೆಟ್ಟ ಮತ್ತು ಕೆಮ್ಮಣ್ಣು ಗುಂಡಿ ಈ ಪ್ರದೇಶಗಳು ಹೊರದೇಶದ ಜಾತಿಯ ಹುಳುಗಳನ್ನು ಸಾಕುವುದಕ್ಕೆ ಮತ್ತು ಬೆಳಸುವುದಕ್ಕೆ ಬಹಳ ಅನುಕೂಲವಾಗಿವೆಯೆಂದು ಗೊತ್ತಾಗಿದೆ.

ಒಬ್ಬ ಸದಸ್ಯರು—ನಂದಿ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ನಂದಿಯಲ್ಲಿ ಪ್ರಯತ್ನಮಾಡಿದ್ದು ಫಲಕಾರಿಯಾಗಲಿಲ್ಲ. ಆದ್ದರಿಂದ ಇದಕ್ಕಾಗಿಯೇ ಎಂದು ಬಿಳಿಗಿರಿರಂಗನ ಬೆಟ್ಟದಲ್ಲಿ 5-6 ಎಕರೆ ಪ್ರದೇಶದಷ್ಟು ಕಾಡುಕಡಿದು ಎಲ್ಲಾ ಏರ್ಪಾಡು ಗಳನ್ನೂ ಮಾಡಿದ್ದೇವೆ. ಬಿಳಿಗಿರಿರಂಗನ ಬೆಟ್ಟದಲ್ಲಿ ಯೂ ಹೀಗೆ 10-12 ಎಕರೆ ಪ್ರದೇಶ ಬಿಡಿಸಿಕೊಟ್ಟಿ ದ್ದೇವೆ. ಈ ಪ್ರಕಾರ ಅಲ್ಲಿ Seeds ತಯಾರುಮಾಡಿ ಎಲ್ಲಾ ಕಡೆಗೂ ಹಂಚಬಹುದೆಂದು ಮಾಡಿದೆ. ಪ್ರೈದಾನ ಪ್ರದೇಶದಲ್ಲಿ ಬಹಳ ಒಳ್ಳೆಯ ಫಲಿತಾಂಶಗಳು ಬಂದಿವೆ ಯೆಂದು ಗೊತ್ತಾಗಿದೆ.

ಎರಡನೆಯದಾಗಿ ಕರ್ಕೂರೇರಿಂಗನ್ನೂ ಉತ್ತಮ ಪಡಿಸಬೇಕೆಂದು ಸರ್ಕಾರದವರ ಉದ್ದೇಶ. ಅದಕ್ಕೂ ಚಂದ್ರಿಕೆ ವಗೈರೆ ಆಗಬೇಕು. ಜಪಾನ್ ದೇಶದಲ್ಲಿ ಎರಡುಸಾರಿ ಮಾತ್ರ ಮೇಯಿಸಿದರೆ ಸಾಕೆಂದು ಹೇಳು ತ್ತಿದ್ದಾರೆ; ಮತ್ತು ಅದರಂತೆಯೇ ಮಾಡಿ ಬೇಕಾದಷ್ಟು Labour ಖರ್ಚನ್ನೂ ಸೊಪ್ಪಿನ ಖರ್ಚನ್ನೂ ಉಳಿಸುತ್ತಿ ದ್ದಾರೆಂದು ಗೊತ್ತಾಗಿದೆ. ಅದೇ ಪ್ರಯತ್ನಗಳನ್ನು ಇಲ್ಲಿಯೂ ಮಾಡಿ ಸಾಧ್ಯವಾದರೆ ಆದಷ್ಟು ಜಾಗ್ರತೆ ಜಾರಿಗೆ ತರಬೇಕೆಂದು ಮಾಡಿದ್ದೇವೆ.

ಚರಕ ರೀಲಿಂಗನ್ನು ಉತ್ತಮಪಡಿಸಬೇಕೆಂದು ಹೇಳಿ ದರು. ಇದರಲ್ಲಿ ಭಿನ್ನಾಭಿಪ್ರಾಯವಿಲ್ಲ. ಆದರೆ ಏನೇ ಹೊಸ ಮಾರ್ಪಾಡುಗಳನ್ನು ತೋರಿಕೊಟ್ಟರೂ ನಮ್ಮ ಜನರು ಅದನ್ನು ಬೇಗ ಒಪ್ಪಿಕೊಳ್ಳುವುದಿಲ್ಲ. ಆದ್ದರಿಂದ ಉತ್ತಮ ವಿಧಾನಗಳನ್ನು ಕಂಡುಹಿಡಿಯು ವುದರ ಜೊತೆಗೆ ಅದನ್ನು ಜಾರಿಗೆ ತರಬೇಕಾದರೆ ಕಾಲ ಬೇಕಾಗುತ್ತದೆ. ಇದೇ ಸಂದರ್ಭದಲ್ಲಿ ಫಿಲೇಚರ್ ರೀಲಿಂಗ್ ನಿಂದ ಬರಬಹುದಾದ ಪೈಪೋಟಿಯನ್ನು ಮಾನ್ಯ ಸದಸ್ಯರು ತಿಳಿಸಿದರು. ಆದರೆ ವಾಸ್ತವವಾಗಿ ಫಿಲೇಚರ್ ರೀಲಿಂಗ್ ಚರಕ ರೀಲಿಂಗಿನ ಸರಿಗೆ ಬರ ಲಾರದೆಂದು ಹೇಳಬೇಕು. ಮೈಸೂರು ದೇಶದಲ್ಲಿ ಇದೊಂದು ವೈಶಿಷ್ಟ್ಯವೆಂದು ಹೇಳಬೇಕು. Charaka reeling sucessfuly competes with filature reeling ಇಲ್ಲಿ ಚರಕ ರೀಲಿಂಗಿಗೆ ತಗಲುವ ಖರ್ಚು ಬಹಳ ಕಡಿಮೆಯಾಗಿದೆ. ಕೇಂದ್ರ ಸರ್ಕಾರದ ವರು ಇದಕ್ಕೆ ರಕ್ಷಣೆ ಬೇರೆ ಕೊಟ್ಟಿದ್ದರು. ಆ ರಕ್ಷಣೆ ಯನ್ನು ಇನ್ನುಮುಂದಕ್ಕೂ ಕೊಡಬೇಕೆಂದು ಕೇಳಿ ಕೊಂಡಿದ್ದೇವೆ. ಏಕೆಂದರೆ ನಮ್ಮ ಸಂಸ್ಥಾನದಲ್ಲಿ 50,000 ಜನ ಇದನ್ನೇ ಗೃಹ ಕೈಗಾರಿಕೆಯಾಗಿಟ್ಟು ಕೊಂಡಿದ್ದಾರೆ. ಇದಕ್ಕಿಂತ ಒಳ್ಳೆಯ ಗೃಹಕೈಗಾರಿಕೆ ಯಾವುದೂ ಇಲ್ಲವೆಂದು ಹೇಳಬೇಕು. ಅದರಲ್ಲೂ ನಮ್ಮವರು ಈ ವಿಚಾರದಲ್ಲಿ ಅಷ್ಟು ಓದಿ ತಿಳಿಯದವ ರಾದರೂ ತಕ್ಕಮಟ್ಟಿಗೆ ತಮ್ಮ ಅನುಭವದಿಂದಲೇ ಒಂದನೇ ಮಟ್ಟದ ರೀಲರುಗಳಾಗಿದ್ದಾರೆ. ಆದ್ದ ರಿಂದ ಈ ಕೈಗಾರಿಕೆಗೆ ನಾವು ಆದಷ್ಟು ರಕ್ಷಣೆ ಕೊಟ್ಟು ನೋಡಿಕೊಳ್ಳಬೇಕಾದ್ದು ಅವಶ್ಯಕವೆಂದು ತಿಳಿದಿದ್ದೇವೆ.

ಇನ್ನು ಈ ರೇಷ್ಮೆಯ ವಿಚಾರದಲ್ಲಿ ಅನೇಕ ಕೆಲಸ ಗಳನ್ನು ಮಾಡಬೇಕಾಗಿದೆ. ಇದಕ್ಕೊಂದು ರೆಗ್ಯುಲೇ ಟೆಡ್ ಮಾರ್ಕೆಟ್ ವ್ಯವಸ್ಥೆಯಿರಬೇಕು. ಇದರಲ್ಲಿ ಕೆಲಸಮಾಡುವವರೆಲ್ಲರಿಗೂ ಒಳ್ಳೆಯ ಬೆಲೆಗಳು ದೊರೆ ಯುವಂತಾಗಬೇಕು, ಗ್ರೇಡಿಂಗ್ ಇರಬೇಕು. ಇವ ಕ್ಕೆಲ್ಲಾ ತಕ್ಕ ಏರ್ಪಾಡುಗಳನ್ನು ಮಾಡಬೇಕೆಂದಿದ್ದಾರೆ.

ಶ್ರೀಮಾನ್ ನಾರಾಯಣಗೌಡರು ಒಂದು ಸೆಮಿನಾರ್ ಏರ್ಪಾಡು ಮಾಡಬೇಕೆಂದು ಹೇಳಿದರು. ಕೋ-ಆಪ ರೇಟಿವ್ ಸೆಮಿನಾರ್ ಆದಮೇಲೆ ಅದೇ ರೀತಿ ಎಲ್ಲಕ್ಕೂ ಮಾಡಬೇಕೆಂಬ ಯೋಚನೆಗಳು ಜನರಲ್ಲಿ ಉಂಟಾಗು ತ್ತಿವೆ. ನಿಜವಾಗಿಯೂ ಇದು ಅಗತ್ಯ. ಈ ಕಸಬಿನಲ್ಲಿ ಯಾರ್ಯಾರು ಪ್ರವೀಣರಾದವರಿರುತ್ತಾರೋ, ಎಷ್ಟು ಜನ ಖಾಸಗಿ ಜನರು ಈ ಉದ್ಯಮಗಳಲ್ಲಿ ತೊಡಗಿರು ತ್ತಾರೋ, ಸೊಪ್ಪು ಬೆಳೆಯುವವರು, ಹುಳು ಸಾಕು ವವರು, ಗೂಡು ಬೆಳೆಸುವವರು, ಫಿಲೇಚರ್ ಕೈಗಾರಿಕೆ ನಡೆಸುತ್ತಿರುವವರು, ಚರಕ ರೇಷ್ಮೆ ಮಾಡತಕ್ಕವರು ಮುಂತಾಗಿ ಪ್ರತಿಯೊಂದು ಬಾಬಿನವರಲ್ಲಿಯೂ 5—6 ಪ್ರತಿನಿಧಿಗಳನ್ನು ತೆಗೆದುಕೊಂಡು ಅವರು ಒಟ್ಟಿಗೆ ಕಲೆತು ಪರಸ್ಪರ ಕಷ್ಟನಷ್ಟಗಳನ್ನು ಸಮಾಲೋಚನೆಮಾಡು ವುದು ಉತ್ತಮವೆಂದು ಹೇಳಿದ್ದಾರೆ. ಆದ್ದರಿಂದ ಸರ್ಕಾರದವರೂ ಈ ಸೂಚನೆಯನ್ನು ಸಹಾನುಭೂತಿ ಯಿಂದ ಪರಿಶೀಲಿಸುವವರಾಗಿದ್ದಾರೆಂದು ನಾನು ಹೇಳ ಬಲ್ಲೆ, ಇದಕ್ಕಾಗಿ ಒಂದು ಸೆಮಿನಾರ್ ಮಾಡಬೇಕು

ಅಥವಾ ಒಂದು ಸಮಿತಿಯನ್ನು ಮಾಡಬೇಕೆಂಬುದನ್ನು ನಾನೂ ಒಪ್ಪುತ್ತೇನೆ. ಒಟ್ಟಿನಲ್ಲಿ ಇದನ್ನು ಅಭಿವೃದ್ಧಿ ಮಾಡುವುದಕ್ಕೆ ಏನೇನು ಮಾಡಬೇಕೋ ಅದೆಲ್ಲವನ್ನೂ ಮಾಡುವುದಕ್ಕೆ ಸರ್ಕಾರದವರು ಸಿದ್ಧರಾಗಿದ್ದಾರೆ. ಈ ಕೈಗಾರಿಕೆಯ ವಿಷಯದಲ್ಲಿ ಒಂದು ಹೇಳಬೇಕು. ಇಷ್ಟೊಂದು ಏರುಪೇರುಗಳಿರತಕ್ಕ ಕೈಗಾರಿಕೆ ಬೇರೆ ಯಾವ ಕೈಗಾರಿಕೆಯೂ ಇಲ್ಲ. ಆದ್ದರಿಂದ ಸಾಧ್ಯವಾದಷ್ಟುಮಟ್ಟಿಗೆ ಹೀಗೆ ಏರುಪೇರುಗಳಿಗೆ ಸಿಕ್ಕದೆ ಒಂದು ಸ್ಥಾಯಿಯಾದ ಸ್ಥಿತಿಗೆ ಬರುವಂತೆ ಮಾಡಬೇಕು. ಒಂದಾನೊಂದು ಕಾಲದಲ್ಲಿ ಬೇರೆ ಕೈಮಗ್ಗದವರಂತೆ ರೇಷ್ಮೆಯ ಕೈಮಗ್ಗದವರೂ ಬಹಳ ದುರವಸ್ಥೆಯಲ್ಲಿದ್ದರು. ಜೀವನಮಾಡುವುದಕ್ಕೆ ರಹ ಇಲ್ಲದೆ ಮಗ್ಗಗಳನ್ನು ಕಟ್ಟಿಕೂತಿದ್ದರು. ಕಳೆದ ಆಗಸ್ಟ್ ತಿಂಗಳಲ್ಲಿ ಈ ವಿಷಯವನ್ನು ಪರ್ಯಾಲೋಚನೆಮಾಡಿ 40 ಲಕ್ಷ ರೂಪಾಯಿಗಳನ್ನು ಮುಂಗಡವಾಗಿ ಕೊಟ್ಟು ಪರದೇಶದಿಂದ ನೂಲನ್ನು ತರಿಸಿಕೊಟ್ಟು 1950ನೆಯ ಸೆಪ್ಟಂಬರ್ ತಿಂಗಳಿನಲ್ಲಿ ಇದನ್ನು ಒಂದು ವ್ಯವಸ್ಥೆಗೆ ತಂದು ಇವತ್ತಿನವರೆಗೂ ಅವರ ಯೋಗಕ್ಷೇಮವನ್ನು ನೋಡಿಕೊಂಡು ಬಂದಿದೆ. 50—60 ರೂಪಾಯಿ ಬೆಲೆಯಿದ್ದ ಆ ಕಾಲದಲ್ಲಿಯೂ ಸಹ ಅವರಿಗೆ 40 ರೂಪಾಯಿಗಳಿಗೆ ಒದಗಿಸಿದ್ದೇವೆ. ಈಗಾಗಲೇ 20,000 ರೂಪಾಯಿಗಳಿಗೆ ಮೇಲ್ಪಟ್ಟು ರಿಸರ್ವ್ ಇಟ್ಟುಕೊಂಡು ಒಂದು ಸೊಸೈಟಿ ಏರ್ಪಾಡಾಗಿ ಚೆನ್ನಾಗಿ ಕೆಲಸಮಾಡುತ್ತಿದೆ. ಆದ್ದರಿಂದ ಈ ಕೈಗಾರಿಕೆಗೆ ಸಂಬಂಧಪಟ್ಟವರೆಲ್ಲರ ಯೋಗಕ್ಷೇಮವನ್ನೂ ಸರ್ಕಾರದವರು ನೋಡಿಕೊಳ್ಳುವವರಾಗಿದ್ದಾರೆ. ಅವರ ಅಭಿವೃದ್ಧಿಯಲ್ಲಿ ಆಸಕ್ತಿ ವಹಿಸಿದ್ದಾರೆ, ಇದು ಇನ್ನೂ ಅಭಿವೃದ್ಧಿಯಾಗಬೇಕು. ಇಡೀ ಇಂಡಿಯಾದೇಶದಲ್ಲೇ ರೇಷ್ಮೆ ವ್ಯವಸಾಯಕ್ಕೆ ಇಷ್ಟು ಅನುಕೂಲವಾದ ವಾಯುಗುಣ ಇನ್ನೆಲ್ಲೂ ಇಲ್ಲ. ಸಾಮಾನ್ಯವಾಗಿ ಬಂಗಾಳದಲ್ಲಾಗಲಿ, ಕಾಶ್ಮೀರದಲ್ಲಾಗಲಿ, ಕೊಳ್ಳೆಗಾಲದಲ್ಲಾಗಲಿ, ನಮ್ಮ ದೇಶದಲ್ಲಿ ಈ ಕೈಗಾರಿಕೆಗಿರತಕ್ಕ ಅವಕಾಶ ಮತ್ತೆಲ್ಲೂ ಇಲ್ಲ. ಇಂಥಾದ್ದರಲ್ಲಿ 2½ ಲಕ್ಷ ಎಕರೆಗಳಷ್ಟು ಪ್ರದೇಶದಲ್ಲಿ ನಾವು ಈ ಕೈಗಾರಿಕೆಯನ್ನು ಬೆಳೆಸಬಹುದಾಗಿದೆ !

ಬಹಳವಾಗಿ ಕೊಳ್ಳೆಗಾಲದಲ್ಲಿಯೂ ಈ ಕೈಗಾರಿಕೆ ನಡೆಯುತ್ತಿದೆ. ಸುಮಾರು 2½ ಲಕ್ಷ ಎಕರೆಗಳಷ್ಟು ಪ್ರದೇಶದಲ್ಲಿ ನಮ್ಮ ಮೈಸೂರಿನಲ್ಲಿ ಇದರ ವ್ಯವಸಾಯ ನಡೆಯುತ್ತಿದೆ. ಇದರ ಬಗ್ಗೆ ರಿನ್ಯೂ ಮಾಡತಕ್ಕ ಕಾಲದಲ್ಲಿ ಕೇಂದ್ರ ಸರ್ಕಾರದವರ ಸಹಾಯವನ್ನು ಕೇಳಿದ್ದೇವೆ. ಇಷ್ಟು ಭರವಸೆಯನ್ನು ನಾನು ತಮಗೀಗ ನೀಡುತ್ತೇನೆ. ದಿನೇ ದಿನೇ ಇದರ ವಿಚಾರದಲ್ಲಿ ಸರ್ಕಾರದವರ ಆಸಕ್ತಿ ಹೆಚ್ಚಾಗುತ್ತಿದೆ. ಇಷ್ಟು ಅಂಶಗಳನ್ನು ನಾನೀಗ ತಮಗೆ ತಿಳಿಸಿದ್ದೇನೆ. ಈ ಭರವಸೆಯ ಮೇಲೆ ಮಾನ್ಯಸದಸ್ಯರು ತಮ್ಮ ಸೂಚನೆಯನ್ನು ವಾಪಸ್ಸು ತೆಗೆದುಕೊಳ್ಳುತ್ತಾರೆಂದು ನಂಬಿರುತ್ತೇನೆ.

ಶ್ರೀ ಜಿ. ಎ. ಆಚಾರ್ಯರು.— ಪರದೇಶದಿಂದ ಇಲ್ಲಿಗೆ ತರಿಸಿ ಬೆಂಗಳೂರಿನಲ್ಲಿ ನೇಯ್ಗೆಮಾಡಿ, ಅವುಗಳನ್ನು 'ಮೈಸೂರು ಸೀರೆಗಳು' ಎಂದು ಮಾರಾಟ ಮಾಡುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಇಲ್ಲ.

Mr. SPEAKER.—The question is :

"That a sum not exceeding Rs. 10,35,400 be granted to the Government to defray the charges which will come in course of payment during the year ending 31st day of March 1952, in respect of 'Sericulture'."

The motion was adopted.

DEMAND No. 28—MISCELLANEOUS DEPARTMENTS.

47. Miscellaneous Departments.

The Hon'ble Sri H. SIDDAIYA (Minister for Revenue and Excise).—Sir, on the recommendation of His Highness the Maharaja, I beg to move:

"That a sum not exceeding Rs. 12,81,000 be granted to the Government to defray the charges which will come in course of payment during the year ending 31st day of March 1952, in respect of 'Miscellaneous Departments'."

Mr. SPEAKER.— Motion moved:

"That a sum not exceeding Rs. 12,81,000 be granted to the Government to defray the charges which will come in course of payment during the year ending 31st day of March 1952, in respect of 'Miscellaneous Departments'."

Cut motion No. 107, II List, Sri M. C. Venkateshan.

Discontinuation of "Jeetha System" in the State.

Sri M. C. VENKATESHAN (Mandya District—Depressed Class). - ನನ್ನ ಜೋತಾ ಸೂಚನೆಯಲ್ಲಿ 'if any' ಎನ್ನುವುದನ್ನು ನಾನು ಸೇರಿಸಿರಲಿಲ್ಲ. ಈಗ ಅದನ್ನು ಬಿಟ್ಟು ಮಾತನಾಡಲು ನನಗೆ ಅವಕಾಶಮಾಡಿಕೊಡಬೇಕು.

Mr. SPEAKER.—'if any' ಎಂದು ಅಚ್ಚಾಗಿರತಕ್ಕದ್ದು ಮುದ್ರಣದ ತಪ್ಪು. ಇದನ್ನು ಸೇರಿಸಿಕೊಳ್ಳದೆ ಮಾತನಾಡುವುದಾದರೆ ಆಗಬಹುದು. ಇಲ್ಲವಾದರೆ ತಮಗೆ ಮಾತನಾಡಲಿಕ್ಕೆ ಅವಕಾಶವಿಲ್ಲ. ಆಗ ಇದನ್ನು ತಳ್ಳಿಹಾಕಬೇಕಾಗುತ್ತೆ.

Sri M. C VENKATESHAN.— Sir, I beg to move:

"That the demand under the head '47. Miscellaneous Departments' for Rs. 12,81,000 be reduced by Re. 1 (to raise a debate for discontinuing 'Jeetha system' in the Mysore State"

Sri M. N. JOIS.—On a point of information. 'if any' ಎಂತಲೇ ಪ್ರಿಂಟ್‌ಮಾಡಿಕೊಡಲಾಗಿದೆ. ಆದರೆ ಈಗ ಅದರ ಮೇಲೆ ಮಾತನಾಡುವುದಿಲ್ಲವೆಂದು ಹೇಳಿದರೆ ಹೇಗೆ ಸಾಧ್ಯವಾಗುತ್ತದೆ?

Mr. SPEAKER. - Provisionally admitted. ಹಾಗೆ ಅವರು ಆ ಕಂಡೀಷನ್‌ಗೆ ಒಪ್ಪಿಕೊಂಡೇ ಮಾತನಾಡುತ್ತಿದ್ದಾರೆ.

ಶ್ರೀ ಎಂ. ಸಿ. ವೆಂಕಟೇಶನ್‌ರವರು (ಮಂಡ್ಯ ಜಿಲ್ಲೆ—ನಿಮ್ನ ಪಂಗಡ).—ಸ್ವಾಮಿ, ಈ ಜೀತಾ ಪದ್ಧತಿಯೆಂಬುದು ಬಹಳ ಹಿಂದಿನಕಾಲದಿಂದಲೂ, ಒಂದಲ್ಲಾ ಒಂದು ರೀತಿಯಲ್ಲಿ ಜಾರಿಯಲ್ಲಿದ್ದೇ ಇದೆ. ಮಾನವ ಕುಲಕ್ಕೆ ಇದಕ್ಕಿಂತಲೂ ಹೇಯವಾದ ಕಸಬು ಮತ್ತೊಂದಿಲ್ಲವೆಂದು ತೋರುತ್ತದೆ. ಈ ಪದ್ಧತಿ ಜಾರಿಯಲ್ಲಿರುವುದರಿಂದ ಮನುಷ್ಯನ ಬಾಳ್ವೆ ಒಂದು ಪಶುವಿಗಿಂತ

(ಶ್ರೀ ಎಂ. ಸಿ. ವೆಂಕಟೇಶ್ವರರವರು).

ಕೀಳಾಗಿಹೋಗಿದೆ. ಹೀಗಾಗಿ ಮಾನವನಿಗಿರತಕ್ಕ ಮೂಲಭೂತ ಹಕ್ಕುಗಳಿಗೆಲ್ಲ ಈಗ ಧಕ್ಕೆಯುಂಟಾಗಿದೆ. ಸರ್ಕಾರದವರು ಇದಕ್ಕಾಗೇ ಒಂದು ಪ್ರತ್ಯೇಕ ಇಲಾಖೆ ಯನ್ನು ತೆರೆದಿರುವಾಗ ಈ ಜೀತಾ ಪದ್ಧತಿಗೆ ತುತ್ತಾಗಿ ರತಕ್ಕ ಹರಿಜನರನ್ನು ಕಾಪಾಡತಕ್ಕದ್ದು ಇವರ ಕರ್ತವ್ಯ. ಮತ್ತು ಇವರನ್ನು ಸಂರಕ್ಷಣೆಮಾಡತಕ್ಕ ಭಾರ ಅವರಿಗೆ ಸೇರಿದ್ದು. ಆದರೆ ಇಲ್ಲಿಯವರೆಗೂ ಸರ್ಕಾರ ಈ ಬಗ್ಗೆ ಏನು ಕಾರ್ಯಕ್ರಮವನ್ನೂ ತೆಗೆದು ಕೊಳ್ಳದೆ ಸುಮ್ಮನಿರುವುದು ಬಹಳ ವಿಷಾದಕರವಾದ ವಿಷಯ. ಈ ಪದ್ಧತಿ ಮಲೆನಾಡಿನಲ್ಲಿ ವಿಶೇಷವಾಗಿ ಜಾರಿಯಲ್ಲಿದೆ. ತಮ್ಮ ವಂಶಪಾರಂಪರ್ಯವಾಗಿ, ಅಜ್ಜ, ಮುತ್ತಜ್ಜನ ಕಾಲದಿಂದಲೂ ಹೀಗೆ ನಡೆದು ಕೊಂಡು ಬಂದಿದೆ. ಹೀಗೆ ಈ ಪದ್ಧತಿಗೆ ಸಿಕ್ಕಿರತಕ್ಕವರೆಲ್ಲ ಅಜ್ಞಾನದಲ್ಲಿ ಮುಳುಗಿಹೋಗಿ ಅನೇಕ ವಿಪತ್ತುಗಳಿಗೆ ಗುರಿಯಾಗುತ್ತಿದ್ದಾರೆ. ಆದುದರಿಂದ ತಾವು ಇದನ್ನು ಬೇಗ ಈಗಲಾದರೂ ಸರಿಪಡಿಸುತ್ತೀರೆಂದು ನಂಬಿದ್ದೇನೆ.

ಹೀಗೆ ಈ ಜೀತಾ ಪದ್ಧತಿಗೆ ಸಂಬಂಧಪಟ್ಟ ಪತ್ರಗಳು ರಿಜಿಸ್ಟ್ರೇಷನ್ ಆಫೀಸಿನಲ್ಲಿ ರಿಜಿಸ್ಟ್ರಾಗತಕ್ಕ ಕಾಲದಲ್ಲಿ, ಯಾವ ನಿಯಮಾವಳಿಯನ್ನೂ ಅನುಸರಿಸದೆ ರಿಜಿಸ್ಟರಾಗುತ್ತವೆ. ಜೀತ ಪತ್ರವನ್ನು ರಿಜಿಸ್ಟರ್ ಮಾಡಬಾರದೆಂಬ ಒಂದು ನಿರ್ಬಂಧವನ್ನು ತಾವು ಜಾರಿಗೆ ತರಬೇಕು. ಹೀಗೆ ಇದನ್ನು ತಡೆಗಟ್ಟಿದರೆ ಅವರಿಗೆ ಎಷ್ಟೋ ತೊಂದರೆಗಳು ತಪ್ಪುತ್ತವೆ. ಆದರೆ ಅವರು ಹೀಗೆ ಒಂದು ಇಕ್ಕಟ್ಟಿನಲ್ಲಿ ಸಿಕ್ಕಿಕೊಂಡಿರುವುದರಿಂದ ಅವರಿಗೆ ಯಾವ ಒಂದು ರಿಯಾಯಿತಿಯೂ ದೊರೆಯುತ್ತಿಲ್ಲ. ಒಂದು ಹಬ್ಬ, ಮದುವೆ, ಖಾಯಿಲೆ, ಇತ್ಯಾದಿಗಳ ಬಗ್ಗೆ ರಜಾ ದೊರೆಯದೆ ಸದಾ ಅವರು 24 ಘಂಟೆಗಳೂ ಅವರ ಸೇವೆಯಲ್ಲೇ ಇರಬೇಕಾಗಿದೆ.

Sri M. N. JOIS.—Is it an enforceable contract?

Sri S. RANGA RAO—Is it a legalised system?

ಅಧ್ಯಕ್ಷರು.—ಆ ಕಾಂಟ್ರಾಕ್ಟ್ ಆಕ್ಟು ಈಗ ಹೊರಟು ಹೋಗಿಬಿಟ್ಟಿದೆ. ಹಾಗೆ ಬಲೋದ್ಬಂಧವಮಾಡಲು ಅವಕಾಶವಿಲ್ಲ.

ಶ್ರೀ ಎಂ. ಸಿ. ವೆಂಕಟೇಶ್ವರರವರು.—ಒಂದು ನೂರು ರೂಪಾಯಿಗಳನ್ನು ಏತಕ್ಕಾದರೂ ಸಾಲಮಾಡಿದರೆ, ಆ ಸಾಲ ತೀರ್ವಳಿ ಬಗ್ಗೆ ಆತ, ಆತನ ಮಗ, ಮೊಮ್ಮಗ, ಮರಿಮಗನ ವರೆಗೂ ದುಡಿದಾಗ್ಯೂ ಸಾಲಕ್ಕೆ ಸಾಲ ಹಾಗೇ ಇರುತ್ತದೆ. ಕೊನೆಗೂ ಆ ಸಾಲ ತೀರುವಂತೆಯೇ ಇಲ್ಲ. ಹಾಗೂ ಅಂಥಾ ಸಾಲಕ್ಕಾಗಿ ನಗದಾಗಿ ಹಣ ಕೊಟ್ಟು ತೀರಿಸುತ್ತೇವೆಂದು ಹೇಳಿದರೆ, ಅದಕ್ಕೆ ಅವರು ಒಪ್ಪುವುದೇ ಇಲ್ಲ. ಜೀತಾ ಮಾಡಿಯೇ ತೀರಿಸಬೇಕೆಂದು ಒತ್ತಾಯಮಾಡುತ್ತಿದ್ದಾರೆ. ಆದರೆ ಇಂಥಾ ನವೀನ ಸುಧಾರಣೆಗಳ ಕಾಲದಲ್ಲಿ ಇದು ಇರಬಾರದು. ದೇಶದ ಹಿತದೃಷ್ಟಿಯಿಂದ ಇದನ್ನು ಜಾಗ್ರತೆ ತಪ್ಪಿಸುತ್ತಾರೆಂದು ನಂಬಿದ್ದೇನೆ.

Mr. SPEAKER.—Cut motion moved.

"That the demand be reduced by Rs. 1."

ಶ್ರೀ ಎಂ. ಮಾದಯ್ಯನವರು (ಮೈಸೂರು ಜಿಲ್ಲೆ—ನಿಮ್ನ ಪಂಗಡ).—ಸ್ವಾಮಿ, ಈಗ ಇರತಕ್ಕ ನೂತನ ರಾಜ್ಯಾಂಗ ಕಾನೂನಿನ ಪ್ರಕಾರ ಯಾವ ಒಬ್ಬ ಮನುಷ್ಯನಿಂದಲೂ ಈ (forced labour) ಬಲವಂತದಿಂದ ಕೆಲಸ ಮಾಡಿಸಕೂಡದೆಂದು ಹೇಳಿದೆ. ಈ ಜೀತಾ ಪದ್ಧತಿ ಬಹಳ ಕಷ್ಟ ಮತ್ತು ಕೆಟ್ಟಪದ್ಧತಿ. ನಾನು ಇದರ ಮೇಲೆ ಹೆಚ್ಚು ಪ್ರಸ್ತಾಪ ಮಾಡುವ ಹಾಗಿಲ್ಲ. ಈ ಖೋತಾ ಸೂಚನೆಯ ಸೂಚಕರ ಸೂಚನೆಯ ಮೇಲೆ ಒಂದು ಕಂಡೀಷನ್ ಹಾಕಿರುವುದರಿಂದ ನಾನು ಇದರ ಪೂರ್ಣಪಾತ್ರವನ್ನು ಅಂಗೀಕಾರಮಾಡಿಕೊಳ್ಳಲು ಅವಕಾಶವಿಲ್ಲ. ಆದರೆ ಸರ್ಕಾರದವರು ಇದನ್ನು ಜಾಗ್ರತೆ ಸರಿಪಡಿಸಬೇಕೆಂದು ಕೇಳತಕ್ಕದ್ದು ನ್ಯಾಯವಾಗಿದೆಯೆಂದು ನಾನು ಒಪ್ಪಿಕೊಳ್ಳುತ್ತೇನೆ. ಈಗ ಇದರಲ್ಲಿರತಕ್ಕ ಅನಾನುಕೂಲಗಳೇನೆಂದರೆ.........................

ಅಧ್ಯಕ್ಷರು.—ಆ ಅನಾನುಕೂಲಗಳು ಎಲ್ಲರಿಗೂ ಗೊತ್ತಿದೆ. ಹೊಸದಾಗಿ ಏನಾದರೂ ತಿಳಿಸುವುದಿದ್ದರೆ ತಿಳಿಸಿ.

ಶ್ರೀ ಎಂ. ಮಾದಯ್ಯನವರು.—ಈಗ ಯಾರಾದರೂ ಒಬ್ಬ ಒಂದುನೂರು ರೂಪಾಯಿಗಳ ಸಾಲ ತೆಗೆದುಕೊಂಡರೆ, ಆ ಸಾಲದ ಹಣಕ್ಕೆ ವರ್ಷಒಂದಕ್ಕೆ 10-20 ರೂಪಾಯಿಗಳ ಬಡ್ಡಿಯಾಗುತ್ತದೆ. ಆದರೆ ಹಾಗೆ ಸಾಲಗಾರನು ಬಡ್ಡಿ ಕೊಡದೆ ಇರಬೇಕಾದರೆ, ಅವರಲ್ಲಿ ಜೀತಕ್ಕಿರಬೇಕಾಗುತ್ತೆ. ಆಗ ಅದೇ ರೀತಿ ಒಂದು ಕರಾರನ್ನು ಸಾಲಗಾರನಿಂದ ಬರೆಸಿಬಿಡುತ್ತಾರೆ. ಆಚರಣೆಯಲ್ಲಿರತಕ್ಕದ್ದು ವರ್ಷಂಪ್ರತಿ ಆತನಿಗೆ ಪಾವತಿಯಾಗಬೇಕಾದ ಹಣವನ್ನು ವರ್ಷಕ್ಕೆ 10-20 ರೂಪಾಯಿಗಳಂತೆ ಆತನು ಜೀತಮಾಡುವುದರಿಂದ ತೀರಿಸಿಕೊಳ್ಳಬೇಕೆಂದಿರುತ್ತದೆ. ಹೀಗೆ ಆತನು ಒಂದುವರ್ಷ ಜೀತ ಮಾಡಿದನಂತರ ಆತನು ಆ ಕರಾರಿನಲ್ಲಿ ಹೀಗೆ ಒಂದು ವರ್ಷದ ಬಾಬ್ತು ಪಾವತಿಯಾಗಿರುತ್ತೆಂಬ ಬಗ್ಗೆ ಷರಾ ಬರೆದುಕೊಡಬೇಕೆಂದು ಕೇಳಿದರೆ, ಹಾಗೆ ಕೊಟ್ಟ ಕರಾರಿಗೆ ಷರಾ ಮಾಡದಿದ್ದರೂ ಹೋಗಲಿ, ಆ ಕರಾರನ್ನೇ ಪುನಃ ಹಿಂದಕ್ಕೆ ಕೊಡದಂತೆ ಇಟ್ಟುಕೊಂಡುಬಿಡುತ್ತಾರೆ. ಹೀಗಾಗಿ ಅವರಿಗೆ ಯಾವ ಸ್ವಾತಂತ್ರ್ಯವೂ ಇರುವುದಿಲ್ಲ. ಹಾಗೆ ಜೀತಾ ಇರತಕ್ಕ ಮನುಷ್ಯರೆಲ್ಲರೂ ತೀರಾ ಅವಿದ್ಯಾವಂತರು. ಹಾಗಿಲ್ಲದೆ ಒಂದೊಂದು ಸಮಯದಲ್ಲಿ ಜೀತಾ ಇರತಕ್ಕ ಮನುಷ್ಯನು ತಾನು ತೆಗೆದುಕೊಂಡಿದ್ದ ಸಾಲದಬಗ್ಗೆ ಎಷ್ಟು ಹಣ ಬಾಕಿ ನಿಂತಿರುತ್ತದೆಯೋ ಅದನ್ನು ಪೂರಾ ತೀರ್ಮಾನ ಮಾಡಿಬಿಡುತ್ತೇನೆ, ನನ್ನ ಜೀತಾ ಕರಾರನ್ನು ರದ್ದುಪಡಿಸಬೇಕು ಎಂದೇನಾದರೂ ಕೇಳಿದರೆ ಅದಕ್ಕೂ ಅವರು ಅವಕಾಶ ಕೊಡುತ್ತಿಲ್ಲ. ಹೀಗೆ ಯಾವ ದಾಖಲೆಗಳನ್ನೂ ಅವರಿಂದ ಪಡೆದುಕೊಳ್ಳಲು ಇವರಿಗೆ ಶಕ್ತಿಯಿಲ್ಲದಿರುವುದರಿಂದ ಇವರು ಎಷ್ಟುಕಾಲ ಹಾಗೆ ಜೀತಮಾಡಿದರೂ, ಇದ್ದ ಸಾಲ ಇದ್ದಂತೆಯೇ ಇರುತ್ತದೆ. ಪತ್ರ ಸಹ ಕೊಡುತ್ತಿಲ್ಲ. ಹಣ ತೀರಿಹೋಗಿದ್ದರೂ, ಅದರಲ್ಲಿ ಷರಾ ಬರೆಯದೆ ಇರುವುದರಿಂದ, ಅದು ಇದ್ದಹಾಗೇ ಇದ್ದು, ಆತನಿಗೆ ದುಡಿಯುವುದು ತಪ್ಪುವಂತಿಲ್ಲ.................

ಅಧ್ಯಕ್ಷರು.—ಹಾಗೆ ಒತ್ತಾಯಪಡಿಸಿ ದುಡಿಸಿಕೊಳ್ಳಲು ಅವಕಾಶವಿದೆಯೇ?

ಶ್ರೀ ಎಂ. ಮಾದಯ್ಯನವರು.—ಸ್ವಲ್ಪ ಹಣ ಕೊಟ್ಟು ಅದಕ್ಕೆ ಬಡ್ಡಿ ತೆಗೆದುಕೊಳ್ಳದೆ ಅದಕ್ಕೆ ಬದಲಾಗಿ ಜೀತಕ್ಕೆ ಇಟ್ಟುಕೊಳ್ಳುತ್ತಾರೆ. ಹಣ ಮತ್ತು ಬಡ್ಡಿ ತೀರದಿದ್ದರೆ ತಂದೆಯಾಗುತ್ತಲೆ ಮಗನನ್ನು ಅವನ ಬದಲಿಗೆ ಜೀತಕ್ಕೆ ಇಟ್ಟುಕೊಳ್ಳುತ್ತಾರೆ. ಒಂದುವೇಳೆ ಮಧ್ಯೆ ಬಿಟ್ಟರೆ ಕೋರ್ಟಿಗೆ ಹೋಗಿ ದಾವೆಹಾಕಿ ದುಡಿದಿರುವುದಕ್ಕೆ ದಾಖಲೆಯಿಲ್ಲದಿರುವುದರಿಂದ ಜೀತಮಾಡಿದ್ದರೂ ಅದನ್ನು ಇಲ್ಲವೆಂದು ಹೇಳಿ ಹಣ ಮತ್ತು ಬಡ್ಡಿಗೆ ಡಿಕ್ರಿ ಪಡೆಯುತ್ತಾರೆ. ಇದರಿಂದ ತನ್ನ ಜೀತಗಾರ ತನ್ನ ಜಮೀನು, ಮನೆ,

ಆಸ್ತಿಪಾಸ್ತಿ, ಎಲ್ಲವೂ ಕಳೆದುಕೊಳ್ಳುವ ಪರಿಸ್ಥಿತಿ ಬರುತ್ತದೆ. ಹೀಗಾಗುವುದರಿಂದ ಬಹಳ ಅನರ್ಥವಾಗುತ್ತದೆ. ಸಮಾಜದಲ್ಲಿ ಈ ತರಹ ಅನ್ಯಾಯ ಜರುಗುತ್ತಿದೆ. ಇದನ್ನು exploitation ಎಂದು ಹೇಳಬೇಕು. ಆದ್ದರಿಂದ ಜೀತಪದ್ಧತಿಯಲ್ಲಿ ರಿಜಿಸ್ಟರು ಮಾಡುವುದನ್ನು ಕಾನೂನು ಮಾಡಿ ತಪ್ಪಿಸಿದರೆ ಈ ಅನಾನುಕೂಲವು ನಿವಾರಣೆಯಾಗುತ್ತದೆ. ಅಲ್ಲದೆ ರಾಜ್ಯಾಂಗವು ಬಂದು ಒಂದು ವರ್ಷವಾಗಿದೆ. ಅದರ ಪ್ರಕಾರ 14 ವರ್ಷಗಳಿಗೆ ಕಡಮೆ ಇರುವವರನ್ನು ಕಷ್ಟಕರವಾದ ಕೂಲಿ ಕೆಲಸ ವಗೈರೆಗೆ ನೇಮಿಸಬಾರದೆಂದು ರಾಜ್ಯಾಂಗದ 24ನೇ ಆರ್ಟಿಕಲ್‌ನಲ್ಲಿ ಇದ್ದರೂಕೂಡ ಸಣ್ಣ ಮಕ್ಕಳನ್ನು ದನ ಕಾಯುವುದಕ್ಕೆ ಮನೆಕೆಲಸ ಮಾಡುವುದಕ್ಕೆ ವಗೈರೆ ವಿನಃ ಇತರ ಕಷ್ಟಕರವಾದ ಕೆಲಸಗಳಿಗೆ ಉಪಯೋಗಿಸಿಕೊಳ್ಳುತ್ತಾರೆ. ರಾಜ್ಯಾಂಗದಂತೆ ಇದಕ್ಕೆ ಅವಕಾಶವಿಲ್ಲದಿದ್ದರೂ ಸಹ ತಪ್ಪಿಸಲು ಸಾಧ್ಯವಿಲ್ಲದಂತಾಗಿದೆ. ರಾಜ್ಯಾಂಗ ಪ್ರಕಾರ ಜಾರಿಗೆ ಬರಲು ಅವಕಾಶಮಾಡಿ ಈ ಕೆಟ್ಟ ಪದ್ಧತಿಯನ್ನು ತಪ್ಪಿಸಬೇಕು.

ಅಧ್ಯಕ್ಷರು.—ರಿಜಿಸ್ಟ್ರೇಷನ್ ಇಲ್ಲದಿದ್ದರೆ ಹಣ ತೆಗೆದುಕೊಂಡು ಹೊರಟುಹೋದರೆ ಏನು ಮಾಡುವುದು ?

ಶ್ರೀ ಎಂ. ಮಾದಯ್ಯನವರು.—ಹಳ್ಳಿಯಲ್ಲಿ ಜೀತಗಾರನಿಗಿರುವ ಆಸ್ತಿಮೇಲೆ ಮತ್ತು ಒಂದು ನಂಬಿಕೆಮೇಲೆ ಎಷ್ಟು ಕೊಡಬಹುದೋ ಅಷ್ಟನ್ನು ಕೊಟ್ಟು ಕೆಲಸ ಮಾಡಿಸಿಕೊಳ್ಳಬಹುದು. ಮುಂಗಡವಾಗಿ ಕೊಟ್ಟರೂ ಕೊಡಬಹುದು ಅಥವಾ ವರ್ಷದ ಸಂಬಳದ ರೂಪಾಯಿಯನ್ನು ಮಾತ್ರ ಕೊಟ್ಟು ಕೆಲಸ ಮಾಡಿಸಿಕೊಂಡು ಬಾಕಿಯಾದ್ದನ್ನು ಮುಂದೆ ಕೊಡಬಹುದು. ರಿಜಿಸ್ಟ್ರೇಷನ್ ಮೂಲಕ ನಾನಾ ತೊಂದರೆಗಳಿರುವುದರಿಂದ ಅದನ್ನು ತಪ್ಪಿಸಬೇಕು. ತಾವಾಗಿಯೇ ಮುಂದೆ ಬಂದು ಜೀತಮಾಡುತ್ತೇವೆಂದು ಹೇಳುವುದನ್ನು ಯಾರೂ ತಡೆಯುವುದಕ್ಕಾಗುವುದಿಲ್ಲ. ನಿರ್ಬಂಧಪಡಿಸಬಾರದು. ಇಷ್ಟು ಹೇಳಿ ಈ ಷೋತಾ ನಿರ್ಣಯವನ್ನು ಸಮರ್ಥಿಸುತ್ತೇನೆ.

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು (ರೆವೆನ್ಯು ಮತ್ತು ಎಕ್ಸೈಜ್ ಸಚಿವರು).—ಬ್ರೀಚ್ ಆಫ್ ಕಾಂಟ್ರ್ಯಾಕ್ಟ್ ಆಕ್ಟ್ ರಿಪೀಲ್ ಆದ ಲಾಗಾಯ್ತು ಫೋರ್ಸ್ಡ್ ಲೇಬರ್ ನಮ್ಮ ದೇಶದಲ್ಲಿಲ್ಲ. ಅದು ಜಾರಿಯಲ್ಲಿರುವುದಕ್ಕೆ ರಾಜ್ಯಾಂಗದ ಪ್ರಕಾರ ಅವಕಾಶವಿಲ್ಲ. ಹಾಗೆ ಯಾರಾದರೂ ವ್ಯತಿರಿಕ್ತವಾಗಿ ಮಾಡಿದರೆ ಶಿಕ್ಷೆ ಮಾಡುತ್ತಾರೆ. ಎಲ್ಲರಿಗೂ ಸರಿಸಮಾನವಾದ ವ್ಯವಸ್ಥೆಯಿದೆ. ಸಾಲ ತೀರಿಸುವುದಿಲ್ಲ ಎಂದು ಹೇಳಿದರೆ ಶಿಕ್ಷೆಗೊಳಗಾಗಬೇಕಾಗಿರುವುದರಿಂದ ಯಾರಿಗೂ ಆರೀತಿ ಹೇಳುವುದಕ್ಕೆ ಧೈರ್ಯವಿಲ್ಲ. ಕೆಲವರು ಹೇಳುವ ರೀತಿಯಲ್ಲಿ, ಅಷ್ಟೊಂದು ಕಷ್ಟವಾದ ರೀತಿಯಲ್ಲದೆಯೆಂಬ ಅಭಿಪ್ರಾಯ ಬಂದು indirect ಆಗಿ ಕಾನೂನು ಜಾರಿಗೆ ಕೊಡಿ ಎಂದು ಹೇಳಿದಂತಾಗುತ್ತದೆ. ಹಣ ತೆಗೆದುಕೊಂಡ ಮೇಲೆ ಕೂಲಿ ಕೆಲಸ ಇಷ್ಟುದಿವಸ ಮಾಡಬೇಕೆಂದು ಹೇಳಿರುತ್ತಾರೆ. ಬೇಕಾದರೆ ಉಳಿದಿರುವುದನ್ನು ಕೊಟ್ಟು ಬೇಕಾದಾಗ ಬಿಡಬಹುದು. ಇಷ್ಟವಿಲ್ಲದಿದ್ದರೆ ಬಲಾತ್ಕಾರದಿಂದ ಕೆಲಸ ಮಾಡಿಸುವುದಕ್ಕೆ ಅವಕಾಶವಿಲ್ಲ ಎಂದು ನಾನು ತಿಳಿದುಕೊಂಡಿದ್ದೇನೆ. ಹಣ ಕೊಡದಿದ್ದರೆ ಕೋರ್ಟುವರೆಗೆ ಹೋಗಿ ದಾವ ಹಾಕುತ್ತಾರೆ. ಆದರೆ ಅದಕ್ಕೆ ಪರಿಹಾರವಿದೆ. ಹೀಗಿರುವಾಗ ಇಷ್ಟೊಂದು ಚಿಂತೆ ಏಕೆ ಎಂಬುದು ಅರ್ಥವಾಗುವುದಿಲ್ಲ. ಕೆಲವುಕಡೆ ಬಡತನದಿಂದ ಆರ್ಥಿಕ ದುಸ್ಥಿತಿಯಿಂದ ತೊಂದರೆಯಿದೆ. ಅದು ಕಡಮೆಯಾಗುವ ಸಂಭವವಿದೆ. ಮುಖ್ಯವಾಗಿ ವಿದ್ಯಾಬುದ್ಧಿ ಹೆಚ್ಚಿ ಜನ ಜಾಗೃತಿಯುಂಟಾದರೆ ಇವೆಲ್ಲವೂ ಸರಿಹೋಗುತ್ತವೆ
ಯೆಂದು ಒಂದೇಮಾತಿನಲ್ಲಿ ಹೇಳಿದರೆ ಸಾಕಾಗಿದೆ. ಆ
ರಿಂದ ಅವರು ಪ್ರಯತ್ನಮಾಡಿ ಸಮಾಜದಲ್ಲಿ ಮೇ
ಮಟ್ಟಕ್ಕೆ ಬರಲು ಸಾಹಸಪಡಬೇಕು. ಅದಕ್ಕೆ ಸಾ
ವಾದಷ್ಟು ಸಹಾಯ ಮಾಡಬೇಕೆನ್ನುವುದರಲ್ಲಿ ಭಿನ್ನಾ
ಪ್ರಾಯವಿಲ್ಲ. ಆದರೆ ಊಹೆಮಾಡಿ ಆರೀತಿ ತೊಂದ
ಯಿದೆಯೆಂದು ಹೇಳುವುದನ್ನು ಒಪ್ಪುವುದಕ್ಕಾಗುವುದಿ

Sri M. C. VENKATESHAN.—I withdraw the cut motion with the permission of the House.

The cut motion was, by leave of the House, withdrawn.

Mr. SPEAKER.—The question is :

"That a sum not exceeding Rs. 12,81,000 be granted to the Government to defray the charges which will come in course of payment during the year ending 31st day of March 1952, in respect of 'Miscellaneous Departments'."

The motion was adopted.

DEMAND No. 29—CIVIL WORKS.

50. Civil Works.

The Hon'ble Sri T. MARIAPPA (Home Minister).—Sir, on the recommendation of His Highness the Maharaja, I beg to move:

"That a sum not exceeding Rs. 2,02,50,500 be granted to the Government to defray the charges which will come in course of payment during the year ending 31st day of March 1952, in respect of "Civil Works'."

Mr. SPEAKER.—Motion moved:

"That a sum not exceeding Rs. 2,02,50,500 be granted to the Government to defray the charges which will come in course of payment during the year ending 31st day of March 1952, in respect of "Civil Works'."

Delay in construction of Government Buildings.

Sri H. C. LINGA REDDY (Kolar District—General).—Sir, I beg to move:

"That the demand under the head "50. Civil Works" for Rs. 2,02,50,500 be reduced by Re. 1 (to discuss the inordinate delay in the construction of Government buildings in the State of Mysore)."

It is common knowledge that the foundations for a number of buildings in various taluks and districts are laid by the popular Ministers. In each taluk and district headquarters there are six or twelve buildings whose construction

(SRI H. C. LINGA REDDY).

is pending for some reason or other. People are very enthusiastic to compel and cajole the Ministers to lay foundations. Our Hon'ble Ministers accept to lay foundations even before the estimates and plans are ready but after the foundations are laid, they but do not see whether these buildings are put up or not. We see not a single building coming up in the taluk Headquarters or district headquarters. I do not know the reason at all. May be the Executive Engineer will not have taken sufficient pains or the Government Architect is not active for some reason or other; it is very unfortunate that these buildings are still pending construction and completion. This has been causing a good deal of inconvenience and difficulty to the people. For example, in the University, though donations have been collected and deposited, and are not allowed even to earn any interest, they are not made use of for the construction of the buildings. This has caused a lot of inconvenience to the students and there is not enough accommodation to the students at the various district headquarters. Again Sir, in the Medical Department a number of donations have been made for hospitals, maternity wards, etc , and estimates are sanctioned but the construction of buildings like maternity wards in various taluk headquarters is not taken up at all. It is better that the Government pay earnest attention to this aspect of the matter and take up immediately the construction of these buildings. Very often, these donations are made by philanthropic old gentlemen and they would be very anxious that the buildings are put up before they leave this world. It is very unfortunate they will not have the opportunity to see the buildings constructed before they leave this world. Therefore, I request Government to pay attention to the construction of these buildings very early and give an assurance to this House that they will immediately take up the construction of these buildings. With these few remarks I commend this cut motion for the acceptance of this House

Mr. SPEAKER.—Cut motion moved:

"That the demand be reduced by Re. 1."

The Hon'ble Sri T. MARIAPPA.—Sir, there may be a little truth in what Sri Linga Reddy has stated, but I am not prepared to accept the sweeping statement made by my Hon'ble friend. It is true that we have not been able to make adequate provision for the construction of these buildings. Not that we had no desire to provide funds, but we had to divert money for short-term irrigation projects. As I have already explained during the Budget debate, we had to ear-mark on top-priority basis funds for the completion of minor irrigation works. From 1st April 1949 we have spent Rs 1,35,00,000 for the restoration and construction of these short-term irrigation projects. Therefore since we had to divert funds for other more urgent purposes, we could not make adequate provision for the construction of some buildings, roads and bridges also. In many cases, it is true that large sums of money have been donated by the people and we could not provide enough funds for the construction or the completion of buildings including veterinary hospitals, schools, colleges and so forth. If I can quote one instance, the people of Davangere have given donations to the extent of 7 lakhs of rupees. Sir, it is also well to remember that in most of these cases the Government have to contribute twice the amount of donations in order to take up the works on hand. Therefore it has been extremely difficult to find funds for some of these buildings and it is true Sir, that during the last two years we have slowed down the construction of buildings, road repairs and bridges. That is because we had to provide more money for the Grow More Food Schemes. That is the very reason why we have not been able to provide adequate funds for other constructions Sir, if I may take the House into confidence. ......

